೧೯೩	ಎಲ್.ಆರ್. ಶಿವರಾಮಗೌಡ	ನಾಗಮಂಗಲ
೧೯೪	ಬಿ. ಶಿವರಾಮು	ಗಂಡಸಿ
೧೯೫	ಶಿವಶೇಖರಪ್ಪಗೌಡ ಶಿರ್ವಾಳ	ಶಹಪುರ
೧೯೬	ಶ್ರೀಕಾಂತ ಶೆಟ್ಟಪ್ಪ ಭೀಮಣ್ಣವರ್	ಚಿಕ್ಕೋಡಿ
೧೯೭	ಎಂ. ಶ್ರೀನಿವಾಸಯ್ಯ	ಟಿ. ನರಸೀಪುರ
೧೯೮	ಶ್ರೀರಂಗದೇವರಾಯಲು	ಗಂಗಾವತಿ
೧೯೯	ಸಿ.ಆರ್. ಸಗೀರ ಅಹಮದ್	ಚಿಕ್ಕಮಗಳೂರು
೨೦೦	ನರನಾಯಿಕ್ ಅಜಯಕುಮಾರ ಸಾಂಬಸದಾಶಿವ	ಬಾಗಲಕೋಟೆ
೨೦೧	ಸದತ್ ಅಲಿಖಾನ್	ಚನ್ನಪಟ್ಟಣ
೨೦೨	ಎಂ. ಸಿದ್ದಮಾದಯ್ಯ	ಕೊಳ್ಳೇಗಾಲ
೨೦೩	ಕೆ. ಸಿದ್ದಯ್ಯ	ಸಂತೆಮಾರನಹಳ್ಳಿ

(ಹಂಗಾಮಿ ಅಧ್ಯಕ್ಷರಾದ ಶ್ರೀ ಎನ್. ಹುಚ್ಚವಣಾಸ್ತಿಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

೨೦೪	ಶಿದ್ದನಗೌಡರ ಪರ್ವತಗೌಡ ಚನ್ನವೀರಗೌಡ	ಕಲಘಟಗಿ
೨೦೫	ಪಿ.ಜಿ.ಆರ್. ಸಿಂಧ್ಯ	ಕನಕಪುರ
೨೦೬	ಶ್ರೀಮತಿ ಸುಮಾ ವಸಂತ	ವಿರಾಜಪೇಟೆ
೨೦೭	ಬಿ. ಸ್ವಾಮಿರಾವ್	ಹೊಸನಗರ
೨೦೮	ಸೋಮಪ್ಪ ಸುವರ್ಣ ಕೆ.	ಮೂಡಬಿದ್ರಿ
೨೦೯	ಕೆ.ಎನ್. ಸೋಮಸುಂದರಂ	ಕೃಷ್ಣರಾಜ
೨೧೦	ಹನುಮೇಗೌಡ ಶೇಖರಗೌಡ ಪಾಟೀಲ	ಕುಷ್ಟಗಿ
೨೧೧	ಕೆ.ಹೆಚ್. ಹನುಮೇಗೌಡ	ಹಾಸನ
೨೧೨	ಡಿ. ಹುಲಗೇಗೌಡ	ಪಾಂಡವಪುರ
೨೧೩	ಹರ್ಷಕುಮಾರ್‌ಗೌಡ	ಚಾಮರಾಜ
೨೧೪	ಎನ್.ಜಿ. ಹಾಲಪ್ಪ	ಚನ್ನಗಿರಿ
೨೧೫	ಹುಲ್ಲಪ್ಪ ಯಮನಪ್ಪ ಮೇಟಿ	ಗುಳೇದಗುಡ್ಡ
೨೧೬	ಡಾ. ಹೆಗ್ಗಪ್ಪ ದೇಶಪ್ಪ ಲಮಾಣಿ	ಬ್ಯಾಡಗಿ
೨೧೭	ಡಾ ವಿಜಯಕುಮಾರ್ ಖಂಡ್ರೆ	ಬಾಲ್ಕಿ

೧.೦೦ ಪಿ.ಎಂ.

ಅಧ್ಯಕ್ಷರವರ ಚುನಾವಣೆ

ಅಧ್ಯಕ್ಷರು.— ಸನ್ಮಾನ್ಯ ಸದಸ್ಯರೇ, ಈಗ ಪ್ರಮಾಣವಚನ ಸ್ವೀಕರಿಸತಕ್ಕಂಥ ಕಾರ್ಯಕ್ರಮ ಮುಂಗಿದಿದೆ. ಮುಂದಿನ ಕಾರ್ಯಕ್ರಮ ಈ ಸಭೆಯ ಅಧ್ಯಕ್ಷರನ್ನು ಆರಿಸುವುದು. ಈ ವಿಷಯದಲ್ಲಿ ಮೂರು ಪ್ರಸ್ತಾವಗಳು ನಮ್ಮ ಮುಂದೆ ಇವೆ. ಒಂದನೆಯ ಪ್ರಸ್ತಾವ ವಯನ್ಯ ಎಂ.ವಿ. ವೆಂಕಟಪ್ಪನವರ ಹೆಸರಿನಲ್ಲಿದೆ. ಇದನ್ನು ಮಾನ್ಯ ಕೆ. ಹೆಚ್. ರಂಗನಾಥ್‌ರವರು ಅನುಮೋದಿಸಬೇಕಾಗಿದೆ. ಒಟ್ಟು ಮೂರು ಪ್ರಸ್ತಾವಗಳು ಸಭೆಯ ಮುಂದೆ ಇದ್ದು ಅದರಲ್ಲಿ ಮೊದಲನೇ ಪ್ರಸ್ತಾವವನ್ನು ಸಭೆಯ ಅನುಮೋದನೆಗೆ ಹಾಕುತ್ತೇನೆ. ಈ ಪ್ರಸ್ತಾವ ಸಭೆಯಲ್ಲಿ ಮಂಜೂರಾದರೆ, ಉಳಿದ

ಪ್ರಸ್ತಾವೆಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ. ಈಗ ಮಾನ್ಯ ಎಂ. ವಿ. ವೆಂಕಟಪ್ಪ ನವರು ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಬೇಕೆಂದು, ಅವರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ. — ಮಾನ್ಯ ಅಧ್ಯಕ್ಷರೇ, ಸೋಮನಹಳ್ಳಿ ಮಲ್ಲಯ್ಯನವರ ಮಕ್ಕಳಾದ ಶ್ರೀಮಾನ್ ಕೃಷ್ಣರವರನ್ನು ೯ನೆಯ ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಜೆಜ್. ರಂಗನಾಥ್.— ಮಾನ್ಯ ಎಂ.ವಿ. ವೆಂಕಟಪ್ಪನವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಅಧ್ಯಕ್ಷರು. — ಮಾನ್ಯ ವೀರಪ್ಪ ಮೊಯ್ಲಿಯವರು ತಮ್ಮ ಪ್ರಸ್ತಾವವನ್ನು ಸೂಚಿಸಬೇಕೆಂದೂ ಹಾಗೂ ಮಾನ್ಯ ಡಿ. ಎ. ಚಿನ್ನಪ್ಪನವರು ಅದನ್ನು ಅನುಮೋದಿಸಬೇಕೆಂದೂ ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೇ, ''ಮಾನ್ಯ ಎಸ್. ಎಂ. ಕೃಷ್ಣ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.''

ಶ್ರೀ ಡಿ. ಎ. ಚಿನ್ನಪ್ಪ.— ಮಾನ್ಯ ಮೊಯ್ಲಿಯವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಅಧ್ಯಕ್ಷರು.— ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಹೆಸರಿನಲ್ಲಿ ಪ್ರಸ್ತಾವವನ್ನು ಸೂಚಿಸಬೇಕು ಹಾಗೂ ಮಾನ್ಯ ವಿ.ಎಸ್. ಕೌಜಲಗಿಯವರು ಅನುಮೋದಿಸಬೇಕೆಂದೂ ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ''ಮಾನ್ಯ ಎಸ್.ಎಂ. ಕೃಷ್ಣ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.''

ಶ್ರೀ ವಿ.ಎಸ್. ಕೌಜಲಗಿ.— ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸೂಚಿಸಿರುವ ಪ್ರಸ್ತಾವನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು. —ಈಗ ಮಾನ್ಯ ಎಂ. ವಿ. ವೆಂಕಟಪ್ಪನವರು ಸೂಚಿಸಿರುವ ಹಾಗೂ ಮಾನ್ಯ ರಂಗನಾಥ ರವರು ಅನುಮೋದಿಸಿರತಕ್ಕ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ— ''ಶ್ರೀ ಎಸ್.ಎಂ. ಕೃಷ್ಣ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದಂ''

(ಪ್ರಸ್ತಾವನೆಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರು.— ಶ್ರೀ ಎಸ್. ಎಂ. ಕೃಷ್ಣ ಅವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆಂದು ಈ ಸಭೆಗೆ ಘೋಷಿಸುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದ್ದರಿಂದ ಇತರೆ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕಬೇಕಾಗಿಲ್ಲ. ಈಗ ಶ್ರೀಮಾನ್ ಕೃಷ್ಣ ಅವರನ್ನು ತಾವು ಈ ಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ನಾನು ಸೂಚಿಸುತ್ತೇನೆ. ಹಾಗೂ ಮಾನ್ಯ ಕೃಷ್ಣ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ವಿರೋಧ ಪಕ್ಷದ ನಾಯಕರೂ ದಯವಮಾಡಿ ಈ ಸಭೆಯ ಮುಂದಿರತಕ್ಕ ವಿಷಯದಲ್ಲಿ ಭಾಗವಹಿಸ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮಾನ್ಯ ಎಂ. ವಿ. ವೆಂಕಟಪ್ಪನವರು, ಹಾಗೂ ಎಂ. ವೀರಪ್ಪಮೊಯ್ಲಿಯವರು ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಎಸ್.ಎಂ. ಕೃಷ್ಣ ಅವರನ್ನು ಅಧ್ಯಕ್ಷಪೀಠಕ್ಕೆ ಕರೆದುಕೊಂಡು ಬಂದರು)

(ಮಾನ್ಯ ಅಧ್ಯಕ್ಷರಿಗೆ ಹಸ್ತಲಾಘವವನ್ನು ಕೊಟ್ಟನಂತರ ತಾತ್ಕಾಲಿಕ ಅಧ್ಯಕ್ಷರು ಅವರಿಗೆ ಪೀಠವನ್ನು ಬಿಟ್ಟುಕೊಟ್ಟರು.)

(ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

† ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಇವತ್ತು ಈ ಮಾನ್ಯ ಸಭೆಯು ಸರ್ವಾನುಮತದಿಂದ ತಮ್ಮನ್ನು ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ನಾನು ನನ್ನ ಪರವಾಗಿ, ನನ ಪಕ್ಷದ ಪರವಾಗಿ, ನನ್ನ ಸರ್ಕಾರದ ಪರವಾಗಿ, ಮತ್ತು ಕರ್ನಾಟಕದ ನಾಲ್ಕು ಕೋಟಿ ಜನತೆಯ ಪರವಾಗಿ ತಮಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅಧ್ಯಕ್ಷರೇ, ತಾವು ಈ ಸದನಕ್ಕೆ ಹೊಸಬರೇನೂ ಅಲ್ಲ. ನನಗೆ ನೆನಪಿದ್ದ ಹಾಗೆ ೧೯೬೭ರಲ್ಲಿ ತಾವು ಮೊದಲಬಾರಿಗೆ ಈ ಸದನವನ್ನು ಪ್ರವೇಶ ಮಾಡಿದಿರಿ ಆಗ ನಾನು ಈ ಸದನದಲ್ಲಿ ಲೋಕೋಪಯೋಗಿ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೆ. ಆ ದಿನಗಳು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿವೆ. ನಾನು ಈ ಕಡೆ ಕುಳಿತಿದ್ದೆ, ಬಹುಶಃ ತಾವು ಆ ಕಡೆ ಶ್ರೀಮಾನ್ ಏಕಾಂತಯ್ಯನವರು ಈಗ ಕುಳಿತಿರುವಂತಹ ಸ್ಥಾನದಲ್ಲಿ ಕುಳಿತಿರುತ್ತಿದ್ದಿರಿ. ಇವತ್ತು ಒಂದು ವಿಚಾರವನ್ನು ನಾನು ತುಂಬಿದ ಹೃದಯದಿಂದ ಹೇಳಬೇಕೆಂದರೆ, ತಾವು ಈ ಸದನದಲ್ಲಿ ವಿರೋಧ ಪಕ್ಷದ ಒಬ್ಬ ಜವಾಬ್ದಾರಿಯಂತ ಸದಸ್ಯರಾಗಿ ಕೂಡಾ, ಮಾತನಾಡುವ ಮುಂದೆ, ಬಹಳ ತೂಕದಿಂದ, ಅದರಲ್ಲೂ ಕೂಡಾ ಟೀಕೆ ಮಾಡತಕ್ಕ ಕಾಲದಲ್ಲಿ ಕೂಡಾ. ಒಂದು ಇತಿಮಿತಿ, ಒಂದು ಸ್ಟ್ಯಾಂಡರ್ಡ್ ಇಟ್ಟುಕೊಂಡು ತಾವು ಟೀಕೆ ಮಾಡುತ್ತಿದ್ದಿರಿ. ತಾವು ಭಾಷಣ ಮಾಡುವವರಿದ್ದೀರಿ ಅಥವಾ ತಮ್ಮ ಭಾಷಣ ಆಗುತ್ತಿದೆ ಎಂದರೆ, ಹೊರಗಡೆ ನಮ್ಮ ಸರಕಾರದ ಕಾರ್ಯಗಳು ಇದ್ದರೂ ಕೂಡಾ, ಅದನ್ನೆಲ್ಲಾ ಬಿಟ್ಟು, ನಮ್ಮ ಕೃಷ್ಣರವರು ಮಾತನಾಡುತ್ತಿದ್ದಾರೆ, ಅದನ್ನು ಕೇಳಬೇಕು ಎಂಬ ಕುತೂಹಲದಿಂದ ನಾವು ಈ ಸದನಕ್ಕೆ ಬರುತ್ತಿದ್ದೆವು. ಆ ರೀತಿಯಾಗಿ ತಾವು ವಿರೋಧಪಕ್ಷದ ಸದಸ್ಯರಾಗಿ ಒಂದು ಸತ್ ಸಂಪ್ರದಾಯವನ್ನು ಹಾಕಿದ್ದೀರಿ ಮತ್ತು ಬೆಳೆಸಿಕೊಂಡು ಬಂದಿದ್ದೀರಿ. ತಾವು ತಮ್ಮ ಸದನಕ್ಕೆ ಅಪರಿಚಿತರೇನೂ ಅಲ್ಲ. ತಮ್ಮನ್ನು ಈಗಾಗಲೇ ೧೯೭೨ನೇ ಇಸವಿಯಿಂದ ಎಲ್ಲರೂ ಬಲ್ಲವರಾಗಿದ್ದೇವೆ. ತಾವು ಕರ್ನಾಟಕದ ಜನತೆಯ ಸೇವೆಯನ್ನು ಒಬ್ಬ ಸದಸ್ಯರಾಗಿ ಪ್ರಾರಂಭ ಮಾಡಿ ಮಂತ್ರಿಗಳಾಗಿ ಅನೇಕ ವರ್ಷ ಕೆಲಸಕಾರ್ಯಗಳನ್ನು ಮಾಡಿದ್ದೀರಿ. ತಮ್ಮ ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದೀರಿ. ಅಷ್ಟೇ ಅಲ್ಲದೆ ತಾವು ಕೇಂದ್ರ ಸರ್ಕಾರದಲ್ಲಿ ಒಂದು ಟರ್ಮ್ ಕೇಂದ್ರ ಮಂತ್ರಿಗಳಾಗಿ ಸೇವೆಯನ್ನು ಸಲ್ಲಿಸಿದ್ದೀರಿ. ತಾವೊಬ್ಬ ಸೀಜನ್ಡ್ ಪಾರ್ಲಿಮೆಂಟೇರಿಯನ್ ಎಂದರೂ ತಪ್ಪಾಗುವುದಿಲ್ಲ. ತಮಗೆ ಅಪಾರವಾದಂಥ ಅನುಭವ ಇದೆ ನನಗೆ ಗೊತ್ತಿರುವ ಹಾಗೆ ತಾವು ಪರರಾಷ್ಟ್ರಗಳಲ್ಲಿ ಅಂತರರಾಷ್ಟ್ರೀಯ ಫೋರಮ್‌ನಲ್ಲಿ, ಅಂತರರಾಷ್ಟ್ರೀಯ ಕಾನ್ಫರೆನ್ಸ್‌ಗಳಲ್ಲಿ, ಯುನೈಟೆಡ್ ನೇಶನ್ಸ್, ಅರ್ಗನೈಜೇಶನ್ಸ್‌ಗಳಲ್ಲಿ ಕೂಡ ತಾವೊಬ್ಬ ಪ್ರತಿನಿಧಿಯಾಗಿ ಭಾಗವಹಿಸಿ ಹೇರಳವಾದ ಅನುಭವವನ್ನು ಪಡೆದುಕೊಂಡಿದ್ದೀರಿ. ತಾವು ನಮ್ಮ ಸದನಕ್ಕೆ ಸಭಾಧ್ಯಕ್ಷರಾಗಿ ದೊರೆತದ್ದು ನಮ್ಮೆಲ್ಲರ ಸುದೈವ. ಮತ್ತು ಈ ಸದನದ ಸುದೈವವೆಂದೇ ನಾನು ಭಾವಿಸಿದ್ದೇನೆ. ತಮ್ಮ ಸೇವೆ ರಾಜಕೀಯ ಜೀವನದಲ್ಲಿ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಅಂತಹ ಒಂದು ಮೇಲ್ಪಂಕ್ತಿಯನ್ನು ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿಯೂ ಕೂಡ ತಾವು ಮುಂದುವರಿಸಿಕೊಂಡು ಬರುತ್ತಿರೆಂದು ನಾನು ಆಶಿಸಿ ಅದರಲ್ಲಿ ಯಾವುದೇ ಸಂಶಯ ಇಲ್ಲವೆಂದು ಸಹ ಭಾವಿಸಿ, ಅದಕ್ಕಾಗಿ ನಾನು ತಮ್ಮನ್ನು ಈ ಸದನದ ಮುಖೇನ ಅಭಿನಂದಿಸುತ್ತೇನೆ. ನಾವು ನೀವು ಎಲ್ಲರೂ ಚುನಾವಣೆ ಮುಗಿಸಿ ಬಂದಿದ್ದೇವೆ. ನೀವು ಆ ಕಡೆ ಕುಳಿತುಕೊಂಡಿರಬಹುದು ನಾವು ಈ ಕಡೆ ಬಂದಿರಬಹುದು, ಚುನಾವಣೆ ಮುಗಿದು ಇಲ್ಲಿಗೆ ಬಂದ ಮೇಲೆ ನಾವು ನೀವು ಎಲ್ಲರೂ ಈ ರಾಜ್ಯದ ನಾಲ್ಕು ಕೋಟಿ ಜನರ ಪ್ರತಿನಿಧಿಗಳು ಎಂದು ಭಾವಿಸಿಕೊಂಡು ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಯಾವ ಒಂದು ಪಕ್ಷ ಆಗಲಿ. ಯಾವ ಕ್ಷೇತ್ರದ ಪ್ರತಿನಿಧಿಯಾಗಲಿ ಅಥವಾ ಮತ ಕ್ಷೇತ್ರದ ಪ್ರತಿನಿಧಿಯಾಗಿರಲಿ ನಾನು ಆ ಕ್ಷೇತ್ರದ ಸೀಮಿತ ಪ್ರತಿನಿಧಿ ಎಂದು ಸಂಕುಚಿತ ಮನೋಭಾವನೆಯಿಂದ ಕೆಲಸ ಮಾಡುವುದು ಸರಿಯಲ್ಲ. ನಾವು ಈ ರಾಜ್ಯದ ಪ್ರತಿನಿಧಿಗಳು, ಎಲ್ಲರೂ ಜನತೆಯ ಅಭಿವೃದ್ಧಿಗೆ ದುಡಿಯುವಂತಾಗಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ, ನನ್ನ ಸರ್ಕಾರದ ವತಿಯಿಂದ ಮತ್ತು ನನ್ನ ಪರವಾಗಿ ತಮಗೆ ಸಂಪೂರ್ಣ ಸಹಕಾರ ನೀಡುತ್ತೇನೆಂದು ಭರವಸೆ ನೀಡುತ್ತೇನೆ. ಇದೇ ಸಂದರ್ಭದಲ್ಲಿ ವಿರೋಧಪಕ್ಷದ ಸ್ನೇಹಿತರೇ ತಮ್ಮ ಸಂಪೂರ್ಣ ಸಹಕಾರ ನೀಡಿ ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯುತ್ತಾರೆಂದು ನಾನು ಮತ್ತೊಂದು ಆಸೆ ಮಾಡುತ್ತೇನೆ ಆ ಬಗ್ಗೆ ನಾನು ಯಾರಿಗೂ ಹೆಚ್ಚು ಹೇಳುವಂತಿಲ್ಲ. ಸದನದ ಕಾರ್ಯಕಲಾಪಗಳು ಅದು ಅಸೆಂಬ್ಲಿಯಾಗಿರಲಿ, ಪಾರ್ಲಿಮೆಂಟ್ ಆಗಿರಲಿ, ಕೌನ್ಸಿಲ್‌ನಲ್ಲಿ ಆಗಿರಲಿ ರಾಜ್ಯಸಭೆಯಲ್ಲಿ ಆಗಲಿ ಕಾರ್ಯಕಲಾಪಗಳು ನಡೆಯುವಾಗ ತಮ್ಮ ಮುಂದೆ ಒಂದು ಗುರಿಯನ್ನು ಇಟ್ಟುಕೊಂಡಿರಬೇಕು. ಸದನದ ಕಾರ್ಯಕಲಾಪಗಳು ನಡೆಯುವಾಗ ಅನೇಕ ಸಲ ಅಡ್ಡಿ ಆತಂಕಗಳು ಬಂದಿರುವುದನ್ನು ನಾವು

---

† ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನೋಡಿದ್ದೇವೆ. ನಾವು ಈ ರಾಜ್ಯದ ಪ್ರತಿನಿಧಿಗಳು ಎಂದು ಸದಸ್ಯರು ತಮ್ಮ ಮನಸ್ಸಿನಲ್ಲಿ ತಿಳಿದು ಕೊಂಡಿರಬೇಕೆಂದು. ಅದಕ್ಕೆ ನಾನು ಮೊದಲೇ ಹೇಳಿದ್ದುದು ಸದನದ ಕಾರ್ಯಕಲಾಪಗಳು ಶಾಂತಿಯುತವಾಗಿ ನಡೆಯಬೇಕಾದರೆ the Opposition should have its say and the Ruling Party should have its way. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಬಹುಶಃ ಸದನದ ಕಾರ್ಯಕಲಾಪಗಳಿಗೆ ಅಂತಹ ಅಡ್ಡಿ ಆಗುವುದಿಲ್ಲವೆನ್ನುವ ಭರವಸೆಯನ್ನು ನಾನು ಇಟ್ಟುಕೊಂಡಿರುತ್ತೇನೆ. ಇವೊತ್ತು ನಮ್ಮ ಮತ್ತೊಂದು ಸುದೈವವೆಂದರೆ ನಮ್ಮ ರಾಷ್ಟ್ರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವವರು ಸಹ ಈ ಸದನದ ಒಬ್ಬ ಸದಸ್ಯರು. ಅದು ಕೂಡ ನಮ್ಮ ಸಂದೈವ, ಅವರು ಪ್ರಮಾಣ ವಚನ ಸ್ವೀಕಾರ ಮಾಡಲು ಬಂದಾಗ ನಾನು ಒಂದು ಮಾತು ಹೇಳಿದೆ ಅದೇನೆಂದರೆ ತಮ್ಮನ್ನು ನಾನು ಸದನದ ಒಬ್ಬ ಸದಸ್ಯರೆಂದು ಸ್ವಾಗತ ಮಾಡುವುದರ ಜೊತೆಗೆ ಈ ರಾಷ್ಟ್ರದ ಯೋಜನಾ ಆಯೋಗದ ಉಪಾಧ್ಯಕ್ಷರೆಂದೂ ಸಹ ಸ್ವಾಗತ ಮಾಡುತ್ತೇನೆಂದು, ನಾನು ಆ ಮಾತು ಹೇಳಿದ ತಾತ್ಪರ್ಯ ಇಷ್ಟೇ. ನಮ್ಮ ರಾಜ್ಯಕ್ಕೆ ಸೇರಿದ ಅನೇಕ ಯೋಜನೆಗಳು ಕೇಂದ್ರದಲ್ಲಿ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ಅವು ಇದುವರೆವಿಗೂ ಒಂದು ಸ್ವರೂಪ ತಾಳಿಲ್ಲ, ಕೇಂದ್ರ ಸರ್ಕಾರದ ಜವಾಬ್ದಾರಿಯುತ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ಪ್ಲಾನಿಂಗ್ ಕಮಿಷನ್ ಕ್ಲಿಯರೆನ್ಸ್ ಇಲ್ಲದೆ ಇದು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಅಂಥಾ ವರ ಕೊಡುವ ಡಿಪಾರ್ಟ್‌ಮೆಂಟಿಗೆ ನಮ್ಮ ಮಾನ್ಯ ಸದನದ ಸದಸ್ಯರೇ ಡೆಪ್ಯುಟಿ ಛೇರ್ಮನ್ ಆಗಿದ್ದಾರೆ ಎನ್ನುವುದಕ್ಕಿಂತ ಹೆಚ್ಚಿನ ಸಂತೋಷದ ಸಂಗತಿ ಮತ್ತೆ ಯಾವುದೂ ಇಲ್ಲ, ಅವರು ಪ್ಲಾನಿಂಗ್ ಕಮಿಷನ್ ಡೆಪ್ಯುಟಿ ಛೇರ್ಮನ್ನರಾಗಿ ಮುಂದುವರಿದು ಕರ್ನಾಟಕದ ಸೇವೆಯನ್ನು ಅವರು ಮಾಡಲಿ. ಮಾನ್ಯ ಅಧ್ಯಕ್ಷರೇ, ತಮಗೆ ನನ್ನ ಪಕ್ಷದ ವತಿಯಿಂದ, ನನ್ನ ಸರ್ಕಾರದ ವತಿಯಿಂದ ಹಾಗೂ ನನ್ನ ವತಿಯಿಂದ ಸಂಪೂರ್ಣವಾದ ಸಹಕಾರವನ್ನು ತಮಗೆ ನೀಡುತ್ತೇವೆ. ಈ ಸಭೆಯ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದಕ್ಕಾಗಿ ತಮಗೆ ದೇವರು ಶಕ್ತಿ ಸಾಮರ್ಥ್ಯ ನೀಡಲಿ. ನಿಷ್ಪಕ್ಷಪಾತವಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವ ಒಂದು ರೀತಿಯಾದ ಶಕ್ತಿ ತಮಗೆ ಈಗಾಗಲೇ ಇದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಲು ತಮಗೆ ಶಕ್ತಿ ಕೊಡಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ವಿಚಾರಗಳನ್ನು ಮಂಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೇ, ನೂತನ ಸಭಾಧ್ಯಕ್ಷರವರಿಗೆ ನನ್ನ ವತಿಯಿಂದ, ನನ್ನ ಪಕ್ಷದ ವತಿಯಿಂದ ಮತ್ತು ಜನತೆಯ ವತಿಯಿಂದ ಶುಭಾಶಯಗಳನ್ನು ಅರ್ಪಿಸುತ್ತೇನೆ. ಈಗಾಗಲೇ ಮಾನ್ಯ ಸಭಾ ನಾಯಕರು ಹೇಳಿರುವ ಬಹು ಮಟ್ಟಿನ ಮಾತುಗಳಿಗೆ ನನ್ನ ಸಂಪೂರ್ಣವಾದಂಥ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಸಭಾ-ನಾಯಕರು ಕೆಲವು ಸೂಕ್ಷ್ಮವಾದ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಪ್ರತಿ ಪಕ್ಷದ ಜವಾಬ್ದಾರಿಯ ಕುರಿತು ಸಹ ಅವರು ಎಚ್ಚರಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಸಂಸದೀಯ ನಡವಳಿಕೆಯಲ್ಲಾಗಲೀ, ಅಥವಾ ಅವುಗಳ ವ್ಯವಹಾರಗಳಲ್ಲಾಗಲೀ ನಿಮಗೆ ಇದು ಹೊಸದೇನಲ್ಲ. ನಿಮ್ಮ ರಾಜಕೀಯ ಜೀವನ ಪ್ರಾರಂಭವಾದದ್ದೇ ಸಾರ್ವಜನಿಕ ಸಮಾಜವಾದಿ ಆಂದೋಲನದ ಮೂಲಕ. ಪರಿಸ್ಥಿತಿಗನುಗುಣವಾಗಿ ಬದಲಾವಣೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಅರಿತುಕೊಳ್ಳಬೇಕಾಗುತ್ತದೆ ಹಾಗೆಯೇ ನಡೆದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಾವು ಜನರಂಗಳಿಂದ ವಿಶ್ವಾಸವನ್ನು ಗಳಿಸಿಕೊಂಡು ಬಂದಿದ್ದೀರಿ. ತಮ್ಮ ಸಂಸದೀಯ ವ್ಯವಹಾರದ ಬಗ್ಗೆ ಹೆಚ್ಚು ವ್ಯಾಖ್ಯಾನ ಇಲ್ಲಿ ಅನಗತ್ಯ. ನಮ್ಮಲ್ಲಿರ ತಕ್ಕ ಸಾಹಿತ್ಯ ಭಂಡಾರವೇ ಇದಕ್ಕೆ ಸಾಕ್ಷಿ. ಸಂಸದೀಯ ವ್ಯವಹಾರದ ಮಂತ್ರಿಗಳಾಗಿ, ಸಂಸತ್ತಿನ ಸದಸ್ಯರಾಗಿ, ಬಹು ದಿನಗಳು ಶಾಸನ ಸಭೆಯ ವಿರೋಧ ಪಕ್ಷದ ಪ್ರತಿಭಾನ್ವಿತ ಸದಸ್ಯರಾಗಿ ಸಂಸತ್ತನ್ನು ಮತ್ತು ಸದನವನ್ನು ನಡೆಸಿಕೊಂಡು ಬಂದಿದ್ದೀರಿ. ಆದರೆ, ಈಗಿರುವ ಸದನದ ಸ್ವರೂಪದಲ್ಲಿ ನಿಮ್ಮ ಜವಾಬ್ದಾರಿ ಹೆಚ್ಚಿನದೆಂದು ಹೇಳಿದರೆ ನೀವು ಒಪ್ಪುತ್ತೀರೆಂದು ನಾನು ಭಾವನೆ ಮಾಡುತ್ತೇನೆ. ಶಾಸನ ಸಭೆಗಳಲ್ಲಾಗಲೀ, ಇನ್ನೆಲ್ಲೇ ಆಗಲೀ, ಸಂಖ್ಯೆಯೇ ಪ್ರಧಾನವಾದರೆ ನಾವು ಸಂಖ್ಯೆಯಲ್ಲಿ ಕಡಿಮೆ ಇದ್ದೇವೆ. ಗಂಟಲಿಗಿಂತ ಬುದ್ಧಿಯ ಕೆಲಸ ಹೆಚ್ಚು ಇದೆಯೆಂದು ಭಾವನೆ ಮಾಡತಕ್ಕವರಲ್ಲಿ ನಾನೂ ಒಬ್ಬ. ಅದಕ್ಕೆ ಸ್ಪಂದಿಸತಕ್ಕ ಚಾಣಾಕ್ಷತೆ ನಿಮ್ಮಲ್ಲಿ ಇದೆ. ನಾನು ಪ್ರತಿ ಪಕ್ಷದ ಮುಖಂಡನಾಗಿ ನಿಮ್ಮ ಸಹಾಯ, ಸಹಕಾರವನ್ನು ಕೊಡುವುದಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಶಾಸನ ಸಭೆಯು ಕೀರ್ತಿ, ಪ್ರತಿಷ್ಠೆ. ಗೌರವಗಳು ಏನಿವೆ ಇವನ್ನು ಎತ್ತಿ ಹಿಡಿಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅದರ ಅನುಭವವೂ ನನಗಿದೆ ನಾನು ಆ ಮೇಲಿನ ಸ್ಥಾನದಲ್ಲಿದ್ದು ಇವತ್ತು ಇಲ್ಲಿ ಕೆಳಗೆ ಕುಳಿತಿದ್ದರೂ ಸಹ ಅದರ ಜವಾಬ್ದಾರಿಯ ಅರಿವು ನನಗೂ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

೧-೩೦ ಪಿ.ಎಂ.

ತಮ್ಮಿಂದ ಪ್ರತಿಪಕ್ಷಗಳ ವಾದಕ್ಕಾಗಲೀ, ಪ್ರತಿಭಿಗಾಗಲೀ ಅಥವಾ ಸದನಕ್ಕಾಗಿ, ಸದನದ ಪ್ರಯೋಜನಕ್ಕಾಗಿ ಮಾಡತಕ್ಕಂಥ ಟೀಕೆ-ಟಿಪ್ಪಣಿಗಳಿಗಾಗಲೀ, ಯಾವುದೇ ರೀತಿಯಾದ ತೊಂದರೆಗಳು ಬರುವುದಿಲ್ಲ ಎಂಬ ಒಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ತಮ್ಮಲ್ಲಿ ಇಟ್ಟುಕೊಂಡಿರುವ ವಿಶ್ವಾಸದ ಕಾರಣದಿಂದಾಗಿ ಎರಡನೇ ಪ್ರಸ್ತಾಪವು ಈ ಸದನದಲ್ಲಿ ಬಾಂದಿದ್ದುದಾಗಿದೆ. ಆ ಕಾರಣಕ್ಕಾಗಿ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ನಮ್ಮ ವತಿಯಿಂದ ಯಾವ ಸಹಕಾರವನ್ನು ತಾವು ಬಯಸುತ್ತಿರೋ, ಈ ಸದನ ಬಯಸುತ್ತದೆಯೋ. ಈ ದೇಶದ ಜನರು ಬಯಸುತ್ತಾರೋ ಆ ಒಂದು ಎತ್ತರಕ್ಕೆ ಏರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ಮತ್ತು ಆ ಎಲ್ಲಾ ಕಾರಣಗಳಿಗಾಗಿ ತಮ್ಮ ಕೆಲಸವೂ ಸುಲಭವಾಗಿ ಆಗುತ್ತದೆ ಎಂದು ಹೇಳಿ ತಮ್ಮ ಬಗ್ಗೆ ನನ್ನ ವಿಶ್ವಾಸವನ್ನು ವ್ಯಕ್ತ ಮಾಡುತ್ತಾ, ಈ ಒಂದು ಮಂಡಾನ್ ಕೆಲಸದಲ್ಲಿ ತಮಗೆ ಪೂರ್ಣ ಯಶಸ್ಸು ದೊರೆಯಲಿ, ಅದಕ್ಕೆ ಬೇಕಾದ ಸಂಪೂರ್ಣ ಸಹಕಾರ ನಮ್ಮಿಂದ ಇದೆ ಎಂದು ಹೇಳುತ್ತಾ. ಹಿಂದಿನ ಸದನದ ಸ್ವರೂಪವನ್ನು ನೆನಪಿನಲ್ಲಿಟ್ಟುಕೊಂಡು ಅದನ್ನು ಇನ್ನೂ ಶಕ್ತಿಯುತವಾಗಿ ಮಾಡುವುದಕ್ಕೆ ನಿಮ್ಮ ಸಹಾಯ, ಸಹಕಾರ ಬೇಕಾಗುತ್ತದೆ. ಆ ಒಂದು ಕೆಲಸವನ್ನು ಮಾಡುವುದರಲ್ಲಿ ತಾವುಗಳು ಮುಂದಾಗುತ್ತೀರಿ ಎಂಬ ವಿಶ್ವಾಸವನ್ನು ತಮ್ಮಲ್ಲಿ ಇಟ್ಟುಕೊಂಡು ಕರ್ನಾಟಕ ರಾಜ್ಯದ ಶಾಸನಸಭೆಗೆ ಇರತಕ್ಕಂಥ ಕೀರ್ತಿಗೆ ತಮ್ಮ ಕಾಲದಲ್ಲಿ ಮತ್ತಷ್ಟು ಮೆರುಗು ಬರಲಿ ಎಂದು ಹಾರೈಸಿ, ತಮಗೆ ನನ್ನ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ),--ಸನ್ಮಾನ್ಯ ಸಭಾಧ್ಯಕ್ಷರೇ, ತಾವುಗಳು ಸರ್ವಾನು ಮತದಿಂದ ಈ ಸಭೆಗೆ ಅಧ್ಯಕ್ಷರಾಗಿ ಆಯ್ಕೆಯಾದುದಕ್ಕೆ ನಮ್ಮ ಪಕ್ಷದ ಪರವಾಗಿ ಹಾರ್ದಿಕ ಅಭಿನಂದನೆಗಳು. ಅನೇಕ ಹಿರಿಯರೂ, ಗೌರವಾನ್ವಿತರೂ ಕುಳಿತಂಥ ಈ ಸ್ಥಾನದಲ್ಲಿ ತಮ್ಮಂಥ ಒಬ್ಬ ಅನುಭವಿ ಹಾಗೂ ಶಾಂತ ಸ್ವಭಾವದ ಮತ್ತು ಆತ್ಯುತ್ತಮ ವಾಗ್ಮಿಗಳಾದ ತಾವುಗಳು ಈ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಯಾದುದಕ್ಕೆ ತಮ್ಮನ್ನು ಆಯ್ಕೆ ಮಾಡಿದವರಿಗೆಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಪರವಾಗಿ ನಮ್ಮ ಪೂರ್ಣ ಸಹಕಾರವನ್ನು ತಮಗೆ ಕೊಡುತ್ತೇವೆ ಎಂದು ಹೇಳುತ್ತಾ, ತುಂಬಾ ಅಭಿಮಾನ ಪೂರ್ವಕವಾಗಿ ಮಂಡ್ಯ ಜಿಲ್ಲೆಯವರಾದ ತಾವುಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಸಚಿವ ಸ್ಥಾನಗಳಲ್ಲಿದ್ದು ಅನುಭವಿ ಹಾಗೂ ಧಕ್ಷರೆನಿಸಿಕೊಂಡಂಥವರು ಈ ಸಭಾಧ್ಯಕ್ಷರ ಸ್ಥಾನಕ್ಕೆ ಆಯ್ಕೆಯಾದುದು ತುಂಬಾ ಗೌರವದ ಸಂಗತಿಯಾಗಿದೆ. ಈ ಒಂದು ಗೌರವಾನ್ವಿತ ಸ್ಥಾನದಲ್ಲಿ ಕಾರ್ಯನಿರ್ವಹಿಸುವಾಗ ಈ ಸದನದ ಗೌರವವನ್ನು ಎತ್ತಿ ಹಿಡಿಯುತಕ್ಕಂಥ ಸಂದರ್ಭಗಳಲ್ಲಿ, ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸದಸ್ಯರುಗಳು ಕೆಲವೊಮ್ಮೆ ಎಲ್ಲೆ ಮೀರುವಂಥ ಸಂದರ್ಭಗಳು ಏನು ಬರುತ್ತವೆ ಆ ಸಂದರ್ಭಗಳಲ್ಲಿ ಬಹಳಷ್ಟು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅಂಥ ಸಂದರ್ಭಗಳು ಊಟ ಜಾಸ್ತಿಯಾದಾಗ ಅಜೀರ್ಣವಾದ ಹಾಗೆ ಆಗುತ್ತವೆ. ಆ ಸಂದರ್ಭಗಳಲ್ಲಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಎಲ್ಲೆ ಮೀರಿ ನಡೆದರೂ ಕೂಡ ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡು ಸಹಕಾರ ಮಾಡುವಂಥ ಪರಿಸ್ಥಿತಿಯು ನಿರ್ಮಾಣವಾಗುತ್ತದೆ, ರಾಜ್ಯದ ಶ್ರೀ ಸಾಮಾನ್ಯನ ಹಿತದೃಷ್ಟಿಯಿಂದ ಅವರ ಸಮಸ್ಯೆಗಳ ಪರವಾಗಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ವಿರೋಧ ಪಕ್ಷದವರು ಹೇಗೆ ಮಾತನಾಡಿದರೂ ನಡೆಯುತ್ತದೆ ಎಂದು ಯೋಚನೆ ಮಾಡದೆ ನಮ್ಮ ಕಳಕಳಿಯನ್ನು ಅರ್ಥ ಮಾಡಿಕೊಂಡು ಸಹಕಾರ ಕೊಟ್ಟರೆ ಇಲ್ಲಿ ಸಮಗ್ರವಾಗಿ ಕಾರ್ಯ ಕಲಾಪಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಭಾರತೀಯ ಜನತಾ ಪಕ್ಷವು ತಮಗೆ ಸಹಕಾರವನ್ನು ಕೊಡುತ್ತದೆ ಎಂದು ಹೇಳಿ, ತಮಗೆ ಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI QUMARUL ISLAM (Gulbarga)–Mr. Speaker, Sir, On behalf of myself and on behalf of the Indian Union of Muslim League I heartily congratulate you for being elected as a Speaker of this House. Sir, the Speaker is a custodian of this House and in a good democracy, detailed debates and good debates are very much essential. I hope that you will give opportunity and time to almost all the members equally. Sir, I being a Member of the Muslim League is not only representing the religious, linguistis and cultural minorities but also Scheduled Castes, Backward Clasees and others and I hope

justice will be done to me to express my views. Fortunately, the Hon'ble Chief Minister is from the Hyderabad-Karnataka area & particularly from Gulbarga district which I am representing. Sir, I am a lone opposition member from Gulbarga & Hyderabad-Karnataka region this region has not been developed as any other regions of the state. Therefore, responsibility is cast on my shoulder to see that the Hyderabad-Karnataka region should also be developed on per with other regions.

With these few words, I on my behalf and on behalf of my party congratuiate you on your being elected as the Speaker of this House. Thank you very much.

† ಶ್ರೀ ಸಿ. ಬೈರೇಗೌಡ. (ಮೇಮಗಲ್)—ಸನ್ಮಾನ್ಯ ಸಭಾಧ್ಯಕ್ಷರೇ, ಇಂದಿನಿಂದ ತಾವುಗಳು ತಮ್ಮ ಸಂಸದೀಯ ಜೀವನದಲ್ಲಿ ಈ ಒಂದು ಹೊಸ ಸ್ಥಾನವನ್ನು ಈ ಸಭೆಯಲ್ಲಿ ಅಲಂಕರಿಸಿದ್ದೀರಿ. ಈ ಸದನವು ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿರತಕ್ಕಂಥದ್ದು ತವಂಗೆ ಇನ್ನೂ ಹೆಚ್ಚಿನ ಶೋಭೆಯನ್ನು ಯಶಸ್ಸನ್ನು. ಮತ್ತು ಶ್ರೇಯಸ್ಸನ್ನು ಸೂಚಿಸುತ್ತದೆ. ತಾವುಗಳು ಕೂಡ ವಿರೋಧ ಪಕ್ಷದಲ್ಲಿ ಇದ್ದು ಕೊಂಡು ತಮ್ಮ ಸಂಸದೀಯ ಜೀವನವನ್ನು ಪ್ರಾರಂಭ ಮಾಡಿದವರಾಗಿದ್ದೀರಿ. ವಿರೋಧ ಪಕ್ಷಗಳಿಗೆ ಇರತಕ್ಕಂಥ ಕಷ್ಟಗಳು, ನ್ಯೂನತೆಗಳು. ಅನಾನುಕೂಲತೆಗಳು ಮುಂತಾಗಿ ಇರತಕ್ಕಂಥ ಸಮಸ್ಯೆಗಳು ತಮಗೆ ಚಿರಪರಿಚಿತ ಆದುದರಿಂದ ಆ ವಿಚಾರದಲ್ಲಿ ಹೆಚ್ಚಿಗೆ ಹೇಳತಕ್ಕಂಥದ್ದು ಅನಾವಶ್ಯಕ ಎಂದು ಭಾವಿಸುತ್ತೇನೆ. ತಾವುಗಳು ತಮ್ಮ ಅಪಾರ ಅನುಭವಗಳ ಜೊತೆಯಲ್ಲಿ ರೈತ ಕುಟುಂಬದಿಂದ ಬಂದಿರತಕ್ಕವರಾಗಿದ್ದೀರಿ ಈ ರಾಜ್ಯದ, ದೇಶದ ಕಷ್ಟಗಳು, ಸಮಸ್ಯೆಗಳು ಏನೆಂಬುದು ತಮಗೆ ಗೊತ್ತಿರತಕ್ಕಂಥ ವಿಚಾರಗಳಾಗಿವೆ. ಈ ಸದನದಲ್ಲಿ ರೈತರ ವಿಚಾರ ಬಂದಾಗ, ಗ್ರಾಮಾಂತರ ಕರ್ನಾಟಕದ ಜನತೆಯ ವಿಚಾರ ಬಂದಾಗ ಸ್ವಭಾವತಃ ಗ್ರಾಮಾಂತರದವರೇ ಆಗಿರುವ ತಾವುಗಳು ಹೆಚ್ಚಿನ ಒಂದು ಅವಕಾಶವನ್ನು ಮತ್ತು ಪ್ರೋತ್ಸಾಹವನ್ನು ನಾವುಗಳು ತಮ್ಮಿಂದ ನಿರೀಕ್ಷೆ ಮಾಡುತ್ತೇವೆ. ಈ ಸದನದ ಒಂದು ವೈಶಿಷ್ಟ್ಯ ಏನೆಂದರೆ ಈ ಹಿಂದೆ ಯಾವುದೇ ಆಡಳಿತ ಪಕ್ಷವೂ ಇಷ್ಟೊಂದು ಬಹು ಸಂಖ್ಯೆಯಲ್ಲಿ ಶಾಸನ ಸಭೆಗೆ ಬಂದಿರಲಿಲ್ಲ. ಈ ಬಗ್ಗೆ ಆರೋಗ್ಯದ ಒಂದು ಮಾತು ಹೇಳುವುದಾದರೆ, ಆರೋಗ್ಯದ ಹಿತದೃಷ್ಟಿಯಿಂದ ಯಾವ ವ್ಯಕ್ತಿ ಸ್ಟೂಲಕಾಯ ಆಗಿರುತ್ತಾರೋ ಆ ಕಾಯವು ತೊಂದರೆಗೆ ಈಡು ಮಾಡುತ್ತದೆ. ಅಂಥ ವ್ಯಕ್ತಿಯ ಸ್ಟೂಲಕಾಯತೆ ರೋಗರುಜಿನಗಳಿಗೆ ಅವನನ್ನು ಬಲಿಯಾಗುವಂತೆ ಮಾಡುತ್ತದೆ. ಹಾಗೆಯೇ ಈ ಸದನದಲ್ಲಿ ಬಹು ಸಂಖ್ಯೆಯಲ್ಲಿರುವ ಆಡಳಿತ ಪಕ್ಷವೆಂಬ ವ್ಯಕ್ತಿಗೆ ಅಂಥ ಪರಿಸ್ಥಿತಿಯು ಬಂದಾಗ ನಾವು ಈ ಕಡೆಯಲ್ಲಿ ಕುಳಿತಿರತಕ್ಕಂಥವರು ತಪ್ಪನ್ನು ಹೇಳತಕ್ಕಂಥ ಸಂದರ್ಭಗಳು, ಮತ್ತು ಎಚ್ಚರಿಕೆ ಕೊಡತಕ್ಕಂಥ ಸಂದರ್ಭಗಳು ಅಥವಾ ಪರಿಸ್ಥಿತಿಗಳು ಬರುತ್ತವೆ. ಅಂಥ ಸಂದರ್ಭಗಳಲ್ಲಿ ನಮಗೆ ತಾವುಗಳು ಹೆಚ್ಚಿನ ಒಂದು ಅವಕಾಶವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಈ ರಾಜ್ಯದ ರೈತರ, ಗ್ರಾಮಾಂತರ ಪ್ರದೇಶದ ಜನರ ಪರವಾಗಿ ತಮ್ಮನ್ನು ಅಭಿನಂದಿಸುತ್ತಾ, ತಾವುಗಳು ಈ ಹೊಸ ಸ್ಥಾನವನ್ನು, ಅಲಂಕರಿಸಿದ ಈ ಸಂದರ್ಭದಲ್ಲಿ ತಮಗೆ ಶುಭವನ್ನು ಹಾರೈಸುತ್ತೇನೆ. ಇಷ್ಟು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಾಬಗೌಡ ರುದ್ರಗೌಡಪಾಟೀಲ್ (ಧಾರವಾಡ ಗ್ರಾಮಾಂತರ).— ಸನ್ಮಾನ್ಯ ಸಭಾಧ್ಯಕ್ಷರೇ, ಸಭಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಈ ಸಂದರ್ಭದಲ್ಲಿ ರೈತ ಸಂಘದ ಪರವಾಗಿ ತವಂಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಶಾಸನ ಸಭೆಯ ಕಾನೂನಿಗಿಂತ ಆ ಕಾನೂನಿನ ಹಿಂದೆ ಜನತೆಯ ಹಿತದೃಷ್ಟಿಯನ್ನು ಎತ್ತಿ ಹಿಡಿಯತಕ್ಕಂಥದ್ದು, ಜನರ ಆಶೆ ಆಕಾಂಕ್ಷೆಗಳ ಹಾಗೂ ಆಶೋತ್ತರಗಳ ಬಗ್ಗೆ ಸ್ಪಂಧಿಸತಕ್ಕಂಥ ಒಂದು ಮಹತ್ಕಾರ್ಯವನ್ನು ಮಾಡುವಲ್ಲಿ ನೂತನ ಸಭಾಧ್ಯಕ್ಷರು ಮುಂದಾಗಿರುತ್ತಾರೆ ಎಂದು ನಾನು ಆಶಿಸುತ್ತೇನೆ. ಜನತಂತ್ರವು ಯಶಸ್ವಿಯಾಗುವಲ್ಲಿ ವಿಪಕ್ಷದವರ ಸಹಾಯ ಸಹಕಾರಗಳು ಬೇಕಾಗುತ್ತದೆ. ಕರ್ನಾಟಕ ರಾಜ್ಯದ ಮೂರು ಕೋಟಿ ರೈತ ಭಾಂದವರ ಪರವಾಗಿ ನಮ್ಮ ಪಕ್ಷದ ಸಹಕಾರವನ್ನು ತವಂಗೆ ಕೊಡುತ್ತೇವೆ ಎಂದು ಹೇಳುತ್ತಾ, ಪುನ: ತವ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B. I. PATIL (Uchagaon).— Mr. Speaker, Sir, on behalf of the Maharashtra Ekikaran Samithy, I heartily congratulate you for having been elevated to the Speaker of this August House. You have already had rich experience of various offices and I have no doubt that you will discharge your duties as the custodian of this august House impartially. It is a fact that Karnataka has been formed out of many States, and therefore, it is but natural that this is a multi-linguistic states and not a State having only one language. During the course of discussions on the floor of this House on various subjects, it is imperative that some Members may choose to speak in other languages. When such an occasion arises, I request you, Sir, kindly to control the House and to control those who try to obstruct the speeches of Hon. Members and allow to express their views without any hindrance. Once again, I would say that we are extremely happy that a person of your calibre and experience has been elevated to the post of speaker of this august House. I am sure that your career would be an ideal one as Speaker of this House. I hope you will always endeavour to uphold the highest democratic traditions set by this August House. Once again I congratulate you on behalf of the Maharashtra Ekikaran Samithy, Thank you.

† ಶ್ರೀ ರಾಮಕೃಷ್ಣಹೆಗಡೆ (ಬಸವನಗುಡಿ).— ಮಾನ್ಯ ಅಧ್ಯಕ್ಷರೇ, ತಾವು ಈ ಮಾನ್ಯ ಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ಬಗ್ಗೆ ನನ್ನ ಹೃತ್ಪೂರ್ವಕವಾದಂತಹ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ತಾವು ಈ ಮನೆಗೆ ಅಪರಿಚಿತರಂ ಅಲ್ಲ. ಈ ಮನೆಯ ಅನೇಕ ಸದಸ್ಯರಿಗೆ ತಾವು ಅಪರಿಚಿತರು ಆಳುವ ಪಕ್ಷ ಈ ಒಂದು ಜವಾಬ್ದಾರಿಯ ಸ್ಥಾನಕ್ಕೆ ತಪ್ಪನ್ನು ಆಯ್ಕೆ ಮಾಡಿದ್ದಕ್ಕಾಗಿ ವೈಯಕ್ತಿಕವಾಗಿ ನನಗೆ ತುಂಬಾ ಸಂತೋಷವಾಗಿದೆ. ಅಧ್ಯಕ್ಷ ಸ್ಥಾನದ ಜವಾಬ್ದಾರಿ ಏನು ಆ ಜವಾಬ್ದಾರಿಯನ್ನು ನಿರ್ವಹಿಸುವಾಗ ಯಾವ ಯಾವ ತರಹದ ತೊಂದರೆ ಬರುತ್ತದೆ ಎಂತಹ ಬಿಕ್ಕಟ್ಟಿನ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬ ವಿಚಾರಗಳಲ್ಲಿ ತಮಗೆ ಯಾರೂ ಹೇಳಿಕೊಡಬೇಕಾಗಿಲ್ಲ. ತಾವು ಕೇವಲ ಈ ಮನೆಯ ಸದಸ್ಯರಾಗಿ ಅಷ್ಟೇ ಅಲ್ಲ, ಲೋಕ ಸಭೆಯ ಸದಸ್ಯರಾಗಿ ಸಹ ಅನುಭವವನ್ನು ಪಡೆದಿದ್ದೀರಿ. ತಾವು ಅಧ್ಯಕ್ಷರಾದ ದ್ದರಿಂದ ಒಂದು ನಷ್ಟ ಈ ಮನೆಗೆ ಆಗಿದೆ. ಅದು ಏನೆಂದರೆ ಒಬ್ಬ ಒಳ್ಳೆಯ ವಾಗ್ಮಿಯನ್ನು ಕಳೆದು ಕೊಂಡ ಹಾಗಿದೆ. ಸ್ಪೀಕರ್‌ರವರು ಯಶಸ್ವಿಯಾಗಿ ಕಾರ್ಯ ನಿರ್ವಹಣೆ ಮಾಡುವುದು ಯಾವಾಗ ಎಂದರೆ ಎಷ್ಟು ಕಡಿಮೆ ಮಾತನಾಡುತ್ತಾರೆಯೋ ಅಷ್ಟು ಹೆಚ್ಚು ದಕ್ಷತೆಯಿಂದ ಅವರು ಕೆಲಸ ಮಾಡುತ್ತಾರೆಂದು ಒಂದು ಸಾಮಾನ್ಯವಾದಂತಹ ನಂಬಿಕೆ ಇದೆ. ಇಂಗ್ಲೀಷಿನಲ್ಲಿ "that Speaker is the best who speaks least." ಎಂದು ಹೇಳುತ್ತಾರೆ. ಮಾನ್ಯ ಸದಸ್ಯರುಗಳಲ್ಲಿ ಕೆಲವರು ಈ ಸಭೆಯ ವಿವಿಧ ಪಕ್ಷಗಳ ಸಂಖ್ಯಾ ಬಲದ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಪ್ರಜಾಪ್ರಭುತ್ವದ ಪದ್ಧತಿ ಏನು ಎಂದರೆ ಈ ಪದ್ಧತಿಯನ್ನು ನಾವು ಸರಿಯಾಗಿ ನಡೆಸಿ ಕೊಂಡು ಬಂದರೆ ದೊಡ್ಡವ ಮತ್ತು ಚಿಕ್ಕವ ಎಂದು ಹೇಳತಕ್ಕಂತಹ ಭೇದ ಭಾವವನ್ನು ಇದು ತೆಗೆದು ಹಾಕುತ್ತದೆ. ಅಹಂಕಾರವನ್ನು ಮುರಿಯುತ್ತದೆ. ಜನತೆಯೇ ಶ್ರೇಷ್ಠವಾದಂತಹ ಮತ್ತು ಅಂತಿಮ ವಾದಂತಹ ನಿರ್ಣಯ ದಾತರು ಎಂದು ಹೇಳತಕ್ಕಂಥಾದ್ದನ್ನು ಇದು ನಮಗೆ ತಿಳಿಸುತ್ತದೆ.

ಒಂದು ದೃಷ್ಟಿಯಿಂದ ಈ ಕಡೆಗೆ ಕುಳಿತಂಥವರ ಸಂಖ್ಯೆ ಕಡಿಮೆಯಾಯಿತು ಎಂದು ಹೇಳಿ ನನಗೇನೂ ಬೇಸರವಿಲ್ಲ. ಆ ಕಡೆ ಕುಳಿತಂಥವರ ಸಂಖ್ಯೆ ಸಾಮಾನ್ಯವಾಗಿ ನಾವು ಕಳೆದ ಅನೇಕ ವರ್ಷ ಗಳಿಂದ ನೋಡುತ್ತಾ ಬಂದುದಕ್ಕಿಂತಲೂ ಹೆಚ್ಚು ಇದ್ದುದರಿಂದ ನಮ್ಮ ಸ್ನೇಹಿತರಾದ ಮುಖ್ಯಮಂತ್ರಿಗಳಿಗೆ ನೋವು ತರಬಹುದು ಎನ್ನುವ ಸಂದೇಹ ಬರುತ್ತದೆ. ನಾನು ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ೬೩ ರಿಂದ ೬೫ ರವರೆಗೆ ಅನುಭವ ಮತ್ತು ೧೯೭೫ ರಿಂದ ೮೮ ರವರೆಗೆ ಎರಡೂ ಅವಧಿಯ ಅನುಭವ ಇದೆ. ಆ ಅನುಭವದ ಆಧಾರದಮೇಲೆ ನಾನು ಹೇಳುತ್ತಿದ್ದೇನೆ. ಕೆಲವರು ಅಭ್ಯಾಸ

ಬಲದಿಂದಹಿಂದೆ ಇಲ್ಲಿ ಏನು ಮಾಡುತ್ತಿದ್ದರೋ ಇಲ್ಲಿ ಯಾವ ತರಹದ ಭಾಷಣ ಮಾಡುತ್ತಿದ್ದರೋ ಅಲ್ಲಿಯೂ ಕೂಡಾ ಸ್ವಲ್ಪ ಕಾಲದವರೆಗೆ ಹಾಗೆ ಮಾಡಬಹುದು ಎನ್ನುತಕ್ಕಂಥ ಅನುಮಾನ ನನಗೆ ಇದೆ. ತಾವು ಅತಿ ಉನ್ನತವಾದಂಥ ಪರಂಪರೆಯನ್ನು ಹಿಂದೆ ನಡೆದು ಬಂದಂಥ ಪರಂಪರೆಯನ್ನು ಎತ್ತಿ ಹಿಡಿಯುವುದಷ್ಟೇ ಅಲ್ಲ, ನಿಮ್ಮದೇ ಆದಂಥ ವೈಯಕ್ತಿಕವಾದ ವಿದ್ವತ್ತನ್ನು ಅದರ ಮೇಲೆ ನೀವು ಹಾಕುತ್ತೀರಿ ಮತ್ತು ಹಿಂದಿನದಕ್ಕಿಂತಲೂ ಉತ್ತಮ ರೀತಿಯಲ್ಲಿ ಈ ಪರಂಪರೆಯನ್ನು ನಡೆಸಿಕೊಂಡು ಹೋಗುತ್ತೀರಿ ಎಂದು ಹೇಳತಕ್ಕಂಥ ವಿಶ್ವಾಸ ನನಗಿದೆ ಮತ್ತು ಅದಕ್ಕೆ ಶುಭಾಶಯಗಳನ್ನು ಕೋರುತ್ತೇನೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿದ್ದಾರೆ, ಅವರು ಆಡಿದ ಅಭಿಮಾನದ ಮಾತಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಅಭಿವೃದ್ಧಿಯ ವಿಚಾರ ಬಂದಾಗ ರಾಜಕೀಯವನ್ನು ಎಂದೂ ತಂದಂಥ ವ್ಯಕ್ತಿ ನಾನಲ್ಲ. ನಮ್ಮೆಲರ ಕರ್ತವ್ಯ ನಮ್ಮ ಪಕ್ಷಕ್ಕೆ ಎಷ್ಟು ಇದೆಯೋ ಅದಕ್ಕಿಂತ ಹೆಚ್ಚು ನಮ್ಮನ್ನು ಆರಿಸಿ ಕಳುಹಿಸಿದಂಥ ಜನತೆಗೆ ಇದೆ ಮತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ಇದೆ. ಆ ವಿಚಾರ ಬಂದಾಗ ನಾವು ಪಕ್ಷ ಭೇದಗಳನ್ನು ಮರೆಯಬೇಕಾಗುತ್ತದೆ. ಮತ್ತು ಕರ್ನಾಟಕದ ಯಾವುದೇ ಒಂದು ವಿಚಾರ ಬರಲಿ. ನಾನು ಈ ಉಪಾಧ್ಯಕ್ಷ ಸ್ಥಾನದಲ್ಲಿ ಇದ್ದು ಎಷ್ಟರಮಟ್ಟಿಗೆ ಕರ್ನಾಟಕದ ಹಿತರಕ್ಷಣೆಯನ್ನು ಮಾಡುವುದಕ್ಕೆ ಸಾಧ್ಯವೋ ಮತ್ತು ಎಷ್ಟರಮಟ್ಟಿಗೆ ಕರ್ನಾಟಕಕ್ಕೆ ಆದಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯವೋ ಅದನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆಂದು ನಿಮ್ಮೆಲ್ಲರಿಗೂ ಹೇಳುತ್ತೇನೆ. ನನಗೆ ಒಂದು ಹೆಮ್ಮೆ ಏನೆಂದರೆ ಈ ಮನೆಯ ಸದಸ್ಯನಾಗಿ ಪುನಃ ಆಯ್ಕೆಯಾಗಿ ಬಂದುದಕ್ಕೆ. ಈ ಮನೆ ಈ ಸದನ ಭಾರತದಲ್ಲಿಯೇ ಯಾವುದಕ್ಕೂ ಕಡಿಮೆ ಆದಂಥ ಸದನ ಅಲ್ಲ. ಇದರ ಬಗ್ಗೆ ಪ್ರತಿಯೊಬ್ಬ ಸದಸ್ಯರಿಗೂ ಸ್ವಂತ ಅಭಿಮಾನ ಇರಬೇಕು ಮತ್ತು ಗರ್ವ ಇರಬೇಕು ಆ ಗರ್ವಕ್ಕೆ ತಕ್ಕ ಹಾಗೆ ನಾವು ಈ ಮನೆಯಲ್ಲಿ ನಡೆಯತಕ್ಕಂಥ ನಡವಳಿಕೆಗಳಲ್ಲಿ ಮತ್ತು ಇಲ್ಲಿ ನಡೆಯತಕ್ಕಂಥ ಚರ್ಚೆಯಲ್ಲಿ ತೋರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವಾದ ವಿವಾದ ಇದು ಅತ್ಯಂತ ಅವಶ್ಯಕವಾದುದು ಮತ್ತು ಈ ಮನೆಯ ಉದ್ದೇಶವೇ ಅದು. ವಾದ ಆಗಬೇಕು ಮತ್ತು ವಿವಾದವೂ ಆಗಬೇಕು. ಆದರೆ ಈ ವಾದದ ಉದ್ದೇಶ ಕೇವಲ ವಾದ ಮಾಡತಕ್ಕದ್ದು ಆಗಬಾರದು. ಅದರಿಂದ ವಿಷಾದರೂ ಉಪಯುಕ್ತವಾದ ಪ್ರತಿಫಲ ಸಿಗಬೇಕು ಮತ್ತು ಪ್ರತಿಯೊಂದು ವಿಚಾರವನ್ನು ಪ್ರಸ್ತಾಪ ಮಾಡುವಾಗ ಕನ್ನಡ ನಾಡಿನ ೪ ಕೋಟಿ ಜನತೆ ನಮ್ಮ ಕಣ್ಮುಂದೆ ಇರಬೇಕು. ಇಷ್ಟನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಪುನಃ ಮಾನ್ಯ ಮುಖ್ಯಮಂತ್ರಿಗಳಿಗೆ ಅವರು ಹೇಳಿದ ಅಭಿಮಾನದ ಮಾತಿಗಾಗಿ ನಾನು ಕೃತಜ್ಞತೆ ವ್ಯಕ್ತ ಮಾಡುತ್ತೇನೆ, ಮತ್ತು ನಿಮಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ.

† **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).**— ಅಧ್ಯಕ್ಷರೇ, ಈ ಸದನದ ಅಧ್ಯಕ್ಷರಾಗಿ ತಾವು ಆಯ್ಕೆ ಆದದ್ದನ್ನು ಅತ್ಯಂತ ಅಭಿಮಾನದಿಂದ ನಾನು ಸ್ವಾಗತಿಸುತ್ತೇನೆ. ನಾವು ನಿಮ್ಮಿಂದ ಬಹಳ ನಿರೀಕ್ಷಣೆಯನ್ನು ಇಟ್ಟುಕೊಂಡಿದ್ದೇವೆ. ತಾವು ಮಾದ್ದೂರಿನ ಕೃಷ್ಣ ಆಗದೆ ಮಹಾಭಾರತದ ಕೃಷ್ಣ ಆಗಬೇಕು. ನಾವು ಪಾಂಡವರು ಇದ್ದಹಾಗೆ, ಅವರು ಕೌರವರು ಇದ್ದಹಾಗೆ. ಆದ್ದರಿಂದ ನಮ್ಮ ರಕ್ಷಣೆಯನ್ನು ಸಮಗ್ರವಾಗಿ ಮಾಡಬೇಕಾದುದು ನಿಮ್ಮ ಕರ್ತವ್ಯ. ಈ ಒಂದು ಸಭೆಯಲ್ಲಿ ಬಹಳ ಭೂಷಣಪ್ರಾಯವಾಗಿ ತಾವು ಕುಳಿತಿರತಕ್ಕ ಆಸನವನ್ನು ತುಂಬಿ ಕುಳಿತಿದ್ದ ವಿಕಮೇವ ಮಹಿಳೆ ಎಂದರೆ ಶ್ರೀಮತಿ ನಾಗರತ್ನಮ್ಮನವರು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇದೇನು ಕುರುಕ್ಷೇತ್ರವೆ ?

ಶ್ರೀ ವಾಟಾಳ್ ನಾಗರಾಜ್.— ಈಗ ಯಾವುದೋ ಒಂದು ಪ್ರಶ್ನೆ ನಡೆದಿದೆ. ಮುಂದೆ ನಡೆಯುವುದು ಬಹಳ ಇದೆ. ಕೌರವರನ್ನು ನಾಶ ಮಾಡಬೇಕಾದರೆ ಕೃಷ್ಣನ ಸಹಾಯ ಬೇಕಾಗುತ್ತದೆ. ನಾವು ಯುದ್ಧ ಮಾಡಬೇಕಾಗಿದೆ. ನಿಮ್ಮಲ್ಲಿ ಶಕುನಿ ಮುಂತಾದವರೆಲ್ಲ ಇದ್ದಾರೆ. ಅದು ನಿಮ್ಮ ಸುದೈವ ನಾನು ಬಹಳ ಸಂತೋಷದಿಂದ ಅಭಿಮಾನದಿಂದ ನಮ್ಮ ಸಂಖ್ಯಾ ಬಲದ ಮೇಲೆ ಮಾತನಾಡುತ್ತಿದ್ದೇನೆ ನಿಮ್ಮಲ್ಲಿ ೧೭೭ ಮಂದಿ ಒಂದು ಫ್ಲೇಗು ಅಥವಾ ಕಾಲರಾ ಬಂದ ಹಾಗೆ ಬಂದಿದ್ದಾರೆ. ನಮ್ಮ ಸಂಖ್ಯಾಬಲವನ್ನು ನೋಡಿ ಚರ್ಚೆಯಲ್ಲಿ ಎಷ್ಟೆಷ್ಟು ಪಾಲು ಕೊಡಬೇಕು ಅಷ್ಟನ್ನು ತಾವು ಕೊಡಬೇಕು. ನಮಗೆ ನ್ಯಾಯವನ್ನು ದೊರಕಿಸಿಕೊಡಬೇಕು ಮತ್ತು, ಸತ್ಯವನ್ನು ದೊರಕಿಸಿಕೊಡಬೇಕೆಂದು ನಾನು ಬಹಳ ಅಭಿಮಾನದಿಂದ ತಮ್ಮನ್ನು ಮಹಾಭಾರತದ ಕೃಷ್ಣ ಎಂದು ಹೇಳುತ್ತಿದ್ದೇನೆ. ತಾವು ಇಲ್ಲಿ ಕುಳಿತಿದ್ದಾಗ ಶರಾವತಿ ಕಲ್ಲಿದ್ದಲಿನ ಬಗ್ಗೆ ಮಾತನಾಡಿ ಕಾಂಗ್ರೆಸ್ ಸರ್ಕಾರವನ್ನು ಯದ್ವಾತದ್ವಾ ಟೀಕಿಸಿದಂತಹ ಹಳೆಯ ಇತಿಹಾಸವನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಿಸುತ್ತಿದ್ದೇನೆ ತಾವು ಮರೆತಿದ್ದರೆ ದಯವಿಟ್ಟು ಜ್ಞಾಪಿಸಿಕೊಳ್ಳಿ. ಈಗ ತಾವು ನಮ್ಮ ಪರವಾಗಿ ಸ್ವಲ್ಪ ದಯೆ ತೋರಬೇಕು,

ನಮಗೆ ವಿಚಾರಗಳನ್ನು ವ್ಯಕ್ತ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಅಲ್ಲಿ ಸಾಕಷ್ಟು ಬಹುಮತ ಇದೆ. ಆದ್ದರಿಂದ ನಮಗೆ ರಕ್ಷಣೆ ಬೇಕು. ಆ ರಕ್ಷಣೆಯನ್ನು ನೀವು ನಮಗೆ ಕೊಡಬೇಕು. ಒಂದು ಸಂತೋಷದ ಮಾತನ್ನು ಹೇಳಬೇಕೆಂದರೆ, ೧೯೭೨ರಲ್ಲಿ ಶ್ರೀಮತಿ ನಾಗರತ್ನಮ್ಮನವರು ಆ ಖರ್ಚಿನ ತುಂಬಿ ಕುಳಿತಿದ್ದಿರು. ಅವರನ್ನು ಬಿಟ್ಟರೆ ಬೇರೆ ಯಾರೂ ಆ ಖರ್ಚಿ ತುಂಬಿ ಕುಳಿತವರಿಲ್ಲ. ಈ ಸಾರಿಯೂ ಅವರೇ ಈ ಮನೆಯ ಅಧ್ಯಕ್ಷರಾಗುತ್ತಾರೆಂದು ನನ್ನ ತಲೆಯಲ್ಲಿ ಇತ್ತು. ಈಗೇನೋ ಮಂತ್ರಿಗಳಾಗುತ್ತಾರೆಂದು ಸುದ್ದಿ ಇದೆ. ಮಾನ್ಯ ವೀರೇಂದ್ರ ಪಾಟೀಲರು ಬುದ್ಧಿವಂತಿಕೆ ಉಪಯೋಗಿಸಿ ಅವರನ್ನೇ ಆ ಸ್ಥಾನದಲ್ಲಿ ಕೂರಿಸುತ್ತಾರೆಂದು ಭಾವಿಸಿದ್ದೆ. ಆದರೆ ಅಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಅವರಿಗೆ ಆರೋಗ್ಯ ಸರಿ ಇಲ್ಲವೆಂದು ತಿಳಿದೆ. ಅವರ ಕಾಲದಲ್ಲಿ ಇಲ್ಲಿ ಬಹಳ ಚೆನ್ನಾಗಿತ್ತು. ಈ ಸಭೆಯಲ್ಲಿ, ಇಡೀ ಭಾರತದಲ್ಲೇ ವೈಕುಂಠ ಬಾಳಿಗರಂಥ ಮೇಧಾವಿ ಹಾಗೂ ಧೀಮಂತ ಅಧ್ಯಕ್ಷರನ್ನು ನೋಡಿದ್ದೇವೆ. ಅದೇ ಒಂದು ಪರಂಪರೆ ಕರ್ನಾಟಕ ವಿಧಾನ ಸಭೆಯಲ್ಲಿ ನಡೆದುಕೊಂಡು ಬಂದಿದೆ. ಆ ಒಂದು ಪರಂಪರೆಯಲ್ಲಿ ತಾವು ಯೋಚನೆ ಮಾಡಿ ವಿರೋಧ ಪಕ್ಷಕ್ಕೆ ಯಾವ ರೀತಿ ನ್ಯಾಯ ದೊರಕಿಸಿಕೊಡಬೇಕೆಂಬುದನ್ನು ಮಾಡಬೇಕಾದುದು ತಮ್ಮ ಕರ್ತವ್ಯ. ಮತ್ತೊಂದು ಸುದ್ದಿವವೆಂದರೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ನಾವು ಶಾಸಕರಾಗಿದ್ದೆವು. ಅವರು ಹೋದರು, ನಾವು ಹೋದೆವು. ಆಮೇಲೆ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಇದ್ದ ಪರಿಸ್ಥಿತಿಯೇ ಬೇರೆ, ಇಂದು ೧೭೨ ಮಂದಿ ಶಾಸಕರು ಇರತಕ್ಕ ಆಡಳಿತ ಪಕ್ಷದಲ್ಲಿ ಮುಖ್ಯ ಮಂತ್ರಿಗಳಾಗಿರುವುದೇ ಬೇರೆ. ಇವತ್ತು ಅವರಿಗೆ ಅನುಭವ ಆಗಿರಬೇಕು.

೨೦ ವರ್ಷಗಳ ಹಿಂದೆ ಇದಂಥ ಪರಿಸ್ಥಿತಿಯೇ ಬೇರೆ, ಇವತ್ತು ಇರತಕ್ಕಂಥ ಪರಿಸ್ಥಿತಿಯೇ ಬೇರೆ. ೨೦ ವರ್ಷಗಳ ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ಶ್ರೀಮಾನ್ ವೀರೇಂದ್ರ ಪಾಟೀಲರು ಒಟ್ಟಿಗೆ ಇದ್ದರು. ಲವ ಕುಶ ಎಂದು ಅವರುಗಳು ಕರೆಯಲ್ಪಡುತ್ತಿದ್ದರು. ಇವತ್ತು ಇವರಿಬ್ಬರೂ ಬೇರೆ ಬೇರೆ ಪಕ್ಷದಲ್ಲಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಮಾತನ್ನು ಕೇಳತಕ್ಕ ಸರ್ಕಾರ ಕೇಂದ್ರದಲ್ಲಿ ಇದೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ಈ ಇವರಿಬ್ಬರದೂ ಪಕ್ಷಗಳು ಬೇರೆಯಾದರೂ ಕೂಡ ತೆರೆಮರೆಯಲ್ಲಿ ಕುಳಿತು ಮಾತನಾಡಿ ಈ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ತಾವು ಈ ಸಭೆಯಲ್ಲಿ ಅಧ್ಯಕ್ಷರಾಗಿರುವುದು ನನಗೆ ಬಹಳ ಸಂತೋಷವಾಗಿದೆ. ನಾನು ಮೊದಲಿನಿಂದ ನಿಮ್ಮನ್ನು ನೋಡಿದ್ದೇನೆ. ತಾವು ವಿರೋಧಪಕ್ಷಕ್ಕೆ ಸಾಕಷ್ಟು ಅವಕಾಶ ಕೊಡುತ್ತೀರಿ ಎಂದು ನಾನು ಅಂದುಕೊಂಡಿದ್ದೇವೆ. ನಿಮ್ಮ ಕಡಿ ಕಣ್ಣು ಸಮಗ್ರವಾಗಿ ನಮ್ಮ ಕಡೆ ಇರಲಿ. ಆ ಕಡೆ ಬಹುಮತ ಇದ್ದರೂ ಕೂಡ ನಮ್ಮ ಕಡೆಯೂ ಗಮನ ಕೊಡತಕ್ಕದ್ದು ತಮ್ಮ ಕರ್ತವ್ಯ. ಆದುದರಿಂದ ನಾನು ತಮ್ಮನ್ನು ಅತ್ಯಂತ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ತಾವು ಅತ್ಯಂತ ಉನ್ನತವಾದಂಥ, ಯಶಸ್ವಿಯಾದಂಥ ಅಧ್ಯಕ್ಷರಾಗಬೇಕು ಎಂದು ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).**—ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಈ ಸಭೆಯಲ್ಲಿರುವ ಸದಸ್ಯರಿಗೆಲ್ಲ ತಾವು ಅಧ್ಯಕ್ಷರಾಗಿ ಚುನಾಯಿತರಾಗಿರುವುದು ತುಂಬ ಸಂತೋಷವಾಗಿದೆ. ೧೯೬೭ನೇ ಇಸವಿಯಲ್ಲಿ ತಾವು ಅತಿ ಚಿಕ್ಕವಯಸ್ಸಿನಲ್ಲಿಯೇ ಪ್ರಥಾವಿತ ಮಂತ್ರಿಗಳನ್ನು ಸೋಲಿಸಿ, ವಿಧಾನಸಭೆಗೆ ಚುನಾಯಿತರಾಗಿ ತಮ್ಮ ಧಕ್ಷತೆಯನ್ನು ತೋರಿಸಿದ್ದೀರಿ. ಎಡವೇ ಸಲ ೧೯೬೮ನೇ ಇಸವಿಯಲ್ಲಿ ಲೋಕಸಭೆಗೆ ಚುನಾಯಿತರಾಗಿದ್ದೀರಿ. ಮೂರನೇ ಬಾರಿ ೧೯೭೧ನೇ ಇಸವಿಯಲ್ಲಿ ಲೋಕಸಭೆಗೆ ತಾವು ಚುನಾಯಿತರಾಗಿದ್ದರೂ ಮಾನ್ಯ ದೇವರಾಜ ಅರಸ್‌ರವರು ತಮ್ಮ ದಕ್ಷತೆಯನ್ನು ಕಂಡು ಲೋಕಸಭೆಗೆ ತಮ್ಮಿಂದ ರಾಜೀನಾಮೆ ಕೊಡಿಸಿ ಇಲ್ಲಿ ಮಂತ್ರಿಯನ್ನಾಗಿ ಮಾಡಿದರು. ತಾವು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿ ಬಹಳ ದಕ್ಷತೆಯಿಂದ ಕೆಲಸಕಾರ್ಯಗಳನ್ನು ನಿರ್ವಹಿಸಿದ್ದೀರಿ. ೧೯೭೪ರಲ್ಲಿ ನಾನು ಮೇಲ್ಮನೆಯ ಸಭಾಪತಿಯಾಗಿದ್ದಾಗ ತಾವು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿದ್ದೀರಿ. ಆಗ ನಾನು ಕಣ್ಣಾರೆ ನೋಡಿದ್ದೇನೆ. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ತಾವು ಒಂದು ದಿವಸವೂ ಕೂಡ ಮೇಲ್ಮನೆಯ ವ್ಯವಹಾರಗಳ ಬಗ್ಗೆ ಅಗೌರವ ತೋರಿಸಿಲ್ಲ. ಗೌರವದಿಂದ ದಕ್ಷತೆಯಿಂದ ಗಾಂಭೀರ್ಯದಿಂದ ನಡೆದುಕೊಂಡಿದ್ದೀರಿ. ಈ ಸಂದರ್ಭದಲ್ಲಿ ನನ್ನದು ಒಂದು ವಿನಂತಿ, ಚುನಾವಣೆಗಳು ಬರುತ್ತವೆ ಹೋಗುತ್ತವೆ. ನಾವು ಈ ಸಭೆಯಲ್ಲಿ ಸದಸ್ಯರುಗಳಾಗಿ ನಮ್ಮ ಸಭೆಯ ಘನತೆ, ಗೌರವಗಳನ್ನು ಎತ್ತಿಹಿಡಿಯಬೇಕು ಎನ್ನುವುದು ನನ್ನ ಕೋರಿಕೆ. ಏಕೆಂದರೆ ಜನತೆ ನಮ್ಮನ್ನು ನೋಡುತ್ತಾರೆ. ನಮ್ಮ ಪ್ರತಿನಿಧಿಗಳು ವಿಧಾನಸಭೆಗೆ ಹೋಗಿದ್ದಾರೆ, ಅಲ್ಲಿ ಏನು ಚಟುವಟಿಕೆಗಳನ್ನು ಮಾಡುತ್ತಾರೆ, ನಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆಗಳನ್ನು, ಕಾಲಿಂಗ್ ಅಟೆನ್‌ಷನ್‌ಗಳನ್ನು ಕೇಳಿ ಸರ್ಕಾರದಿಂದ ಉತ್ತರ ಪಡೆಯುತ್ತಾರೆಯೇ ಎಂದು ನೋಡುತ್ತಾ

ಇರುತ್ತಾರೆ. ಆದುದರಿಂದ ಮಾನ್ಯ ಅಧ್ಯಕ್ಷರಿಗೆ ಈ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗುವುದರಲ್ಲಿ ಸಹಕಾರ ಕೊಡಬೇಕು. ಈಗ ೧೦೦ ಜನ ಹೊಸ ಸದಸ್ಯರು ಈ ಸದನದಲ್ಲಿದ್ದಾರೆ. ಈ ೧೦೦ ಜನ ಸದಸ್ಯರಲ್ಲಿ ೩ ಜನ ವಿಧಾನಪರಿಷತ್ತಿನ ಸದಸ್ಯರಾಗಿದ್ದೆವು. ನಾನು, ಶ್ರೀಮಾನ್ ಪುಟ್ಟಸ್ವಾಮಿ ಗೌಡರು ಮತ್ತು ಮಾನ್ಯ ಮಲಕರೆಡ್ಡಿಯವರು ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿದ್ದವು. ಇನ್ನು ೯೭ ಜನ ಹೊಸದಾಗಿ ಸದಸ್ಯರಾಗಿದ್ದಾರೆ. ಇವರಲ್ಲಿ ಅನೇಕರು ಯುವಕರಿದ್ದಾರೆ ಆದ್ದರಿಂದ ಮುಂದೆ ಸದನ ಸೇರುವಷ್ಟರಲ್ಲಿ ನಮ್ಮ ಈ ಸದನದ ವ್ಯವಹಾರಗಳ ಬಗ್ಗೆ ಒರಿಯಂಟೇಷನ್ ಕೋರ್ಸ್‌ಮಾಡಿ ಅವರ ನೆಲ್ಲಾ ಅನುಭವಸ್ಥರನ್ನಾಗಿ ಮಾಡುತ್ತೀರಿ ಎಂದು ನಂಬಿದ್ದೇನೆ. ತಮ್ಮ ಬಗ್ಗೆ ಈ ಸಂದರ್ಭದಲ್ಲಿ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ತಾವು ಅವಿರೋಧವಾಗಿ ಅಧ್ಯಕ್ಷಸ್ಥಾನಕ್ಕೆ ಚುನಾಯಿತರಾಗಿರುವುದು ನಮ್ಮ ಎಲ್ಲರಿಗೂ ಸಂತೋಷವಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಅಧ್ಯಕ್ಷರೆ, ಇದುವರೆಗೂ ಈ ಸದನದಲ್ಲಿ ಉಭಯ ಪಕ್ಷಗಳ ಧುರೀಣರು ಮಾತನಾಡಿದ ಮಾತುಗಳನ್ನು ಕೇಳಿದೆ. ನಿಮ್ಮ ಮೇಲೆ ಅಚಲವಾದ ವಿಶ್ವಾಸ ಎಲ್ಲಾ ಪಕ್ಷದವರಿಗೂ ಇದೆ ಎನ್ನುವುದು ಸೂರ್ಯಪ್ರಕಾಶದಷ್ಟು ನಿಚ್ಚಳವಾಗಿದೆ. ಖುರ್ಚಿಯ ಮಹತ್ವ ಕೆಲವರಿಗೆ ಲಭ್ಯವಾಗುತ್ತದೆ. ನೀವು ನೀವು ಆಟಗಾರರು ಆಟಗಾರರಿಗೆ ಸೋಲುಗೆಲುವು ಬಗ್ಗೆ ಅರಿವು ಇರುವುದಿಲ್ಲ. ಸೋತಾಗಲೂ ಒಂದೇ, ಗೆದ್ದಾಗಲೂ ಒಂದೇ, ಎಲ್ಲರನ್ನೂ ಪ್ರೀತಿಯಿಂದ ಕಾಣುವಂತಹ ವ್ಯಕ್ತಿನೀವಾಗಿದ್ದೀರಿ. ತಮ್ಮನ್ನು Friend of all, enemy of none, ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಕರ್ನಾಟಕ ವಿಧಾನ ಸಭೆಯ ಘನತೆಯನ್ನು ಕಾಪಾಡುವುದರಲ್ಲಿ ತಾವು ಮೊದಲಿಗರಾಗುತ್ತೀರಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವೈಕುಂಠಬಾಳಿಗರವರು ಹಾಕಿಕೊಂಡಂಥ ರೀತಿನೀತಿಗಳು, ರೂಪರೇಷೆಗಳನ್ನು ಅನುಸರಿಸಿದರೆ ಅವು ಈ ಸದನದಲ್ಲಿ ಮೇಲ್ಪಂಕ್ತಿ ಆಗುತ್ತವೆ. ನಾನು ಶಾಸಕಾಂಗ ಪಕ್ಷಕ್ಕೆ ಹೊಸದಾಗಿ ಬಂದಾಗ, ಅವಾಚ್ಯ ಶಬ್ದಗಳನ್ನು ಆಡಿದರೆ, ಅವುಗಳನ್ನು ಆಡಬಾರದು ಎಂದು ಅನೇಕ ಪುಸ್ತಕಗಳನ್ನು ಓದಿ ಅವರು ನಮಗೆ ತಿಳುವಳಿಕೆ ನೀಡುತ್ತಿದ್ದರು. ಜೊತೆಗೆ ಸಂಸದೀಯ ನಡವಳಿಕೆಗಳ ಬಗ್ಗೆ ಹಲವಾರು ಪುಸ್ತಕಗಳನ್ನು ಓದಿ ಹೇಳುತ್ತಿದ್ದರು. ಈ ರೀತಿಯ ಬೋಧಕವಾದ ಮಾತುಗಳು ತಮ್ಮಿಂದಲೂ ಬರಲಿ ಎಂದು ನಾನು ಆಸೆ ಪಡುತ್ತೇನೆ. ವಿರೋಧ ಪಕ್ಷ ಮತ್ತು ಆಳುವ ಪಕ್ಷಗಳಲ್ಲಿ ಸಹೋದ್ಯೋಗಿಯಾಗಿ ಕೆಲಸ ಮಾಡುವಂಥ ಸಂದರ್ಭ ತಮ್ಮಿಂದ ಪ್ರಾರಂಭವಾಗಲಿದೆ. ತಾವು ಸರ್ಕಾರದ, ರಾಜ್ಯದ ಕೀರ್ತಿ ಹಾಗೂ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತೀರೆಂಬುದರಲ್ಲಿ ನನಗೆ ಸಂದೇಹವಿಲ್ಲ. ವಿರೋಧ ಪಕ್ಷದವರಾದ ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ವೀರೇಂದ್ರ ಪಾಟೀಲರು ವಿಶ್ವಾಸವನ್ನು ವ್ಯಕ್ತ ಮಾಡಿ ತಮ್ಮ ಕೆಲಸವನ್ನೂ ಹಗುರ ಮಾಡಲಿಕ್ಕೆ ಹೋಗಿದ್ದಾರೆ. ಉಭಯತ್ರರು ಕೂಡಿ ಈ ಕರ್ನಾಟಕದ ಘನತೆಯನ್ನು ಹೆಚ್ಚು ಮಾಡುವಾಗ ನಿಮ್ಮ ಕೆಲಸ ಕಡಿಮೆಯಾಗುತ್ತದೆ. ನಾವೆಲ್ಲರೂ ಕೂಡಿ ನಿಮಗೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ. ಆಳುವ ಪಕ್ಷದವರಿಗೆ ಸಮಯ ಕೊಡದಿದ್ದರೂ, ವಿರೋಧ ಪಕ್ಷದವರಿಗೆ ಹೆಚ್ಚು ಸಮಯಕೊಟ್ಟು ಜನತೆಯ ಆಗುಹೋಗಳನ್ನು ನಮ್ಮ ಎದುರಿಗೆ ಬೆಂಬಲಿಸಲಿಕ್ಕೆ ಅವಕಾಶ ಕೊಡಬೇಕೆಂದು ಹೇಳಿ, ತಾವು ಮಾದರಿ ಅಧ್ಯಕ್ಷರಾಗಿ ಕೆಲಸ ಮಾಡುವಂಥ ಸೌಜನ್ಯಮಯವಾದ ವಾತಾವರಣ ನಿರ್ಮಾಣವಾಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ಇದು ಸಂತಸದ ಸಮಯ. ತಮಗೆ ವಿವೇಕದ ಜೊತೆಗೆ ವಿನಯ ಇದೆ. ಕಾನೂನು ವಿಚಾರದಲ್ಲಿ ಪಾಂಡಿತ್ಯ ಅಷ್ಟೇ ಅಲ್ಲ ಸ್ವಶಕ್ತಿಯಿಂದ ನಿರ್ಧಾರವನ್ನು, ಅಥವಾ ತೀರ್ಪನ್ನು ಕೊಡತಕ್ಕ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಸಭಾಧ್ಯಕ್ಷರನ್ನಾಗಿ ಪಡೆದಿದ್ದೇವೆ. ಇದು ಹೆಮ್ಮೆಯ ಮಾತು. ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು, ಹಾಗೂ ವಿರೋಧ ಪಕ್ಷದ ನಾಯಕರು, ಇತರೆ ಮಾನ್ಯ ಸದಸ್ಯರುಗಳು ಆಡಿರತಕ್ಕ ಮಾತುಗಳಿಗೆ ಪೂರಕವಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಬಾಳಿಗಾ ಅವರು ೧೯೬೭ ರಲ್ಲಿ ಅಧ್ಯಕ್ಷರಾಗಿದ್ದರು, ಕೆಲವುಸಾರಿ ನ್ಯಾಯಾಲಯದಲ್ಲಿ ನ್ಯಾಯಾಧೀಶರು, ತೀರ್ಪನ್ನು ಕೊಡತಕ್ಕ ಪದ್ಧತಿಯನ್ನು ಕೆಲವರು ಇಟ್ಟುಕೊಂಡಿರುತ್ತಾರೆ. ಹಾಗಯೇ ಈ ಸದನದಲ್ಲಿ ತೀರ್ಪನ್ನು ಕೊಡಬೇಕಾದರೆ ಹಲವಾರು ದಿನಗಳವರೆಗೆ ಅದನ್ನು ಇಟ್ಟುಕೊಳ್ಳದೆ ಆಲ್ಲಿಯೇ ತೀರ್ಪನ್ನು ಕೊಡತಕ್ಕ ಶಕ್ತಿಯ ಪ್ರದರ್ಶನ ಮಾಡತಕ್ಕ ಕೆಲವು ಅಧ್ಯಕ್ಷರನ್ನು ನಾವು ನೋಡಿದ್ದೇವೆ. ಅದನ್ನು ವೈಕುಂಠಬಾಳಿಗಾರವರ ಕಾಲದಲ್ಲಿ ಸ್ಪಷ್ಟವಾಗಿ ನಾವು ನೋಡಿದ್ದೇವೆ.

೨-೦೦ ಪಿ. ಎಂ.

ಕಾನೂನು ವಿಚಾರದಲ್ಲಿ ಪಾಂಡಿತ್ಯ ಇರುವುದರಿಂದ, ಭಾಷೆಯ ಬಗ್ಗೆ ಅಪಾರವಾದಂಥ ಅನುಭವ ಮತ್ತು ಹಿಡಿತ ಇರುವುದರಿಂದ ತಮಗೆ ಈ ಕೆಲಸ ಸಾಧ್ಯತೆ ಇದೆ ಎನ್ನುವ ನಂಬಿಕೆಯಿಂದ ಈ ಮಾತನ್ನು ಆಡಿದ್ದೇನೆ. ಸಹಜವಾಗಿ ಸಭಾಧ್ಯಕ್ಷರು ನೋಡಿದ ಕೂಡಲೇ ಪ್ರಬಲವಾಗಿ ವಾದ ಮಂಡನೆ ಮಾಡತಕ್ಕ ಮಾನ್ಯ ಸದಸ್ಯರುಗಳು ಕೂಡ ತಮ್ಮ ಚಿಂತನೆಯ ಮುಖಕ್ಕೆ ಅನುಗುಣವಾಗಿ ತಮ್ಮ ಸಡತೆಯನ್ನು ಪ್ರದರ್ಶನ ಮಾಡಿರತಕ್ಕ ವಿಚಾರವನ್ನು ನಾವು ನೋಡಿದ್ದೇವೆ. ಕೆಲವೊಮ್ಮೆ ಚರ್ಚೆ ಪರಕಾಷ್ಠೆಯನ್ನು ಮುಟ್ಟಿದಾಗ, ಚರ್ಚೆ ದಾರಿತಪ್ಪುವಂತಹ ಸಂದರ್ಭ ಬಂದಾಗ, ಅದನ್ನು ಸರಿಪಡಿಸತಕ್ಕ ಸದ್ಭಾವನೆಯ ನ್ನು ಮಂಡಿಸುವುದರ ಜೊತೆಗೆ ಸರಿಯಾದ ದಾರಿ ತೋರಿಸತಕ್ಕ ಬಂದು ಶಕ್ತಿಯು ಕೂಡ ಆ ಸ್ಥಾನದಲ್ಲಿರ ಬೇಕಾಗುತ್ತದೆ. ನನಗೆ ಗೊತ್ತಿದೆ. ತಾವು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರತಕ್ಕ ವಿನಯ, ಸಂಯಮ ಹಾಗೂ ಮಾನವೀಯತೆ ಗುಣಗಳಿಂದ ಇದು ಸಾಧ್ಯಕೂಡ ತಮಗೆ ಆಗುತ್ತದೆನ್ನುವ ನಂಬಿಕೆ ನನಗಿದೆ. ಸಹಜವಾಗಿ ಚುನಾವಣೆಗಳು ಮುಗಿದ ಕೂಡಲೇ ಬಹುಮತ ಬಂದಿರತಕ್ಕ ಪಕ್ಷದವರು ಸರ್ಕಾರ ರಚನೆ ಮಾಡುತ್ತಾರೆ. ಅಲ್ಪಮತ ಬಂದಿರುವವರು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವ ಒಂದು ರಾಜಕೀಯ ವ್ಯವಸ್ಥೆ ಇದೆ. ಇಂಥ ಒಂದು 'ಪೊಲಿಟಿಕಲ್ ಸಿಸ್ಟಂ' ನಾವು ಇಟ್ಟುಕೊಂಡಿದ್ದೇವೆ. ಎಷ್ಟೋ ಸಾರಿ ಆಳುವ ಪಕ್ಷದಲ್ಲಿರತಕ್ಕವರು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವ ಸಂದರ್ಭ ಬಂದಾಗ ಏನು ಮಾತನಾಡಬೇಕೆಂಬುದೇ ಗೊತ್ತಾಗದೇ ಇರತಕ್ಕ ಸಂದರ್ಭವನ್ನು ನಾವು ಕಂಡಿದ್ದೇವೆ. ವಿರೋಧ ಪಕ್ಷದಲ್ಲಿರತಕ್ಕವರು ಆಳುವ ಪಕ್ಷಕ್ಕೆ ಒಂದಾಗಿ ಸಂಯಮದಿಂದ ಇರಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದವರ ಕರ್ತವ್ಯ ಹೆಚ್ಚಾಗಿರುವುದನ್ನು ನಾವು ಮನಗಂಡಿದ್ದೇವೆ. ಇಲ್ಲಿ ಸಂಖ್ಯೆಯ ಪ್ರಶ್ನೆ ಮುಖ್ಯವಲ್ಲ. ಮಾನ್ಯ ಸದಸ್ಯ ಹಕ್ಕು ಮುಖ್ಯ. ಸಂಖ್ಯೆ ಪ್ರಶ್ನೆ ಅಮುಖ್ಯವಾಗುತ್ತದೆ. ಇಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಸಭೆಯ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಚರ್ಚೆ ಮಾಡಿಕೊಂಡು ಹೋಗುವ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡರೆ ಸಾಕು. ವಿರೋಧ ಪಕ್ಷದಲ್ಲಿ ಕುಳಿತವರು ನಾವು ವಿರೋಧ ಪಕ್ಷದಲ್ಲಿದ್ದೇವೆಂದು ತಿಳಿದುಕೊಂಡು ಮಾತನಾಡಬೇಕಾಗುತ್ತದೆ. ಈ ಒಂದು ಅಂಶವನ್ನು ಮಾನ್ಯ ರಾಮಕೃಷ್ಣ ಹೆಗಡೆಯವರ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಡಳಿತ ಪಕ್ಷದಲ್ಲಿಯೇ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಬೇಕಂತಹ ಸಂದರ್ಭ ಬರಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾ ನಾಯಕರು, ಸಂಪೂರ್ಣವಾದ ಸಹಕಾರ ಮತ್ತು ಬೆಂಬಲವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬೆಂಬಲದ ಜೊತೆಗೆ ದೇವರು ತಮಗೆ ಒಳ್ಳೆಯದು ಮಾಡಲಿ; ಒಳ್ಳೆಯ ಸಭಾಧ್ಯಕ್ಷರಾಗಿ ಕೆಲಸ ಮಾಡುವಂತಹ ಶಕ್ತಿಯನ್ನು ದಯಪಾಲಿಸಲಿ ಎಂದು ಶುಭ ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು —ಮಾನ್ಯ ಸದಸ್ಯರೆ, ಅತ್ಯಂತ ನಮ್ರತೆಯಿಂದ, ಸದ್ಭಾವನೆಯಿಂದ, ಶುದ್ಧ ಅಂತಃ ಕರಣದಿಂದ ತಾವು ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಸರ್ವಾನುಮತದಿಂದ ಈ ಶಾಸನ ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ನನ್ನ ಆಭಾರಗಳನ್ನು ತಮಗೆ ತಿಳಿಸತಕ್ಕಂತಾದ್ದು ನನ್ನ ಮೊದಲನೆಯ ಕರ್ತವ್ಯ. ಈ ಸರ್ವಾನುಮತಕ್ಕೆ ಕಾರಣೀಭೂತರಾದಂಥ ಮಾನ್ಯ ಮುಖ್ಯಮಂತ್ರಿ ಗಳಿಗೂ ಮತ್ತು ವಿರೋಧ ಪಕ್ಷಗಳ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ಕೂಡ ನಾನು ಋಣಿಯಾಗಿದ್ದೇನೆ. ಶಾಸಕಾಂಗದ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂಥಾದ್ದು ನನ್ನ ಪ್ರಥಮ ಕರ್ತವ್ಯ. ಆ ಕರ್ತವ್ಯದಲ್ಲಿ ನನ್ನಿಂದ ಯಾವುದೇ ಚ್ಯುತಿ ಬರುವುದಿಲ್ಲ ಎನ್ನುವ ಆಶ್ವಾಸನೆಯನ್ನು ಮಾಡಲಿಕ್ಕೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಸದನದ ಗೌರವ, ಪ್ರತಿಷ್ಠೆ, ಹಿಂದೆ ಹಾಕಿಕೊಟ್ಟಿರತಕ್ಕ ಪರಂಪರೆ, ಸತ್‌ಸಂಪ್ರದಾಯ ಗಳು, ಇವುಗಳಿಲ್ಲವನ್ನೂ ಕೂಡ ಮುಂದುವರಿಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ನನ್ನ ಒಬ್ಬನ ಮೇಲೆ ಇದೆ ಎಂದು ನಾನು ಭಾವಿಸುವುದಿಲ್ಲ. ಈ ಸಭೆಯ ಎಲ್ಲಾ ಸದಸ್ಯರ ಮೇಲೂ ಈ ಜವಾಬ್ದಾರಿ, ಈ ಹೊಣೆಗಾರಿಕೆ ಸಮಾನಾಂತರವಾಗಿ ಹಂಚಲ್ಪಟ್ಟಿದೆ ಎನ್ನುವ ಅಭಿಪ್ರಾಯ ನನ್ನದು. ಆ ಕಾರ್ಯ ಮಾಡತಕ್ಕಂಥ ವೇಳೆಯಲ್ಲಿ ನಾನು ಮಾಡಬೇಕಾದಂಥ ಕೆಲಸ ಏನೆಂದರೆ ಸಮನ್ವಯತೆಯನ್ನು ಸಾಧನೆ ಮಾಡಲಿಕ್ಕೆ ಪ್ರಯತ್ನ ಮಾಡತಕ್ಕದ್ದು ದು. ಈಗತಾನೆ ದೇಶಾದ್ಯಂತ ಚುನಾವಣೆಗಳು ನಡೆದಿವೆ. ನನ್ನ ದೃಷ್ಟಿಯಲ್ಲಿ ಚುನಾವಣೆಗಳಲ್ಲಿ ಗೆದ್ದಿರತಕ್ಕಂತ ರಾಜಕೀಯ ಪಕ್ಷಗಳು ಇವೆ, ಸೋತಿರತಕ್ಕಂತ ರಾಜಕೀಯ ಪಕ್ಷಗಳು ಇವೆ. ಆದರೆ ಒಬ್ಬ ಭಾರತೀಯ ಪ್ರಜೆಯಾಗಿ ಈ ಚುನಾವಣೆ ಳಲ್ಲಿ ಗೆದ್ದಿರತಕ್ಕಂತಾದ್ದು ಜನತಂತ್ರ ಎನ್ನತಕ್ಕಂತಾದ್ದನ್ನು ನಾವೆಲ್ಲರೂ ಅರ್ಥಮಾಡಿಕೊಂಡರೆ ಅದು ಮುಂದಿನ ಹಾದಿಗೆ ಸುಗಮ ಮಾಡಿಕೊಡುತ್ತದೆಂದು ನಾನು ಭಾವನೆ ಮಾಡುತ್ತೇನೆ. ಸದನದ ಸ್ವರೂಪದ ಬಗ್ಗೆ ಮಾನ್ಯ ಸದಸ್ಯರು

ಗಳು ನನ್ನ ಗಮನವನ್ನು ಸೆಳೆದಿದ್ದಾರೆ, ಮತ್ತು ಸಂಖ್ಯೆ ಪ್ರಧಾನ ಅಲ್ಲ. ಚರ್ಚೆಗಳಿಗೆ ಹೆಚ್ಚು ಅವಕಾಶ ವನ್ನು ಕೊಡಬೇಕೆಂದು ಹೇಳಿದ್ದಾರೆ. ಇವುಗಳಿಲ್ಲಿ ನಾವೆಲ್ಲಾ ಒಟ್ಟಾರೆ ಒಪ್ಪಿರತಕ್ಕಂತ ಸೂತ್ರಗಳು. ಶಾಸನ ಸಭೆ ವೇದಿಕೆ ಇರತಕ್ಕಂಥಾದ್ದು ಚರ್ಚೆ ಮಾಡಲಿಕ್ಕೆ, ವಾದವಿವಾದ ಮಾಡಲಿಕ್ಕೆ. ಆದರೆ ವಾದ ವಿವಾದ ಮಾಡತಕ್ಕ ಕಾಲದಲ್ಲಿ ಸಂಯಮದಿಂದ, ಜವಾಬ್ದಾರಿಯಿಂದ, ರಚನಾತ್ಮಕವಾಗಿ ಮಾಡುವುದು ಇದ್ದರೆ ಅದು ಪ್ರಜಾಪ್ರಭುತ್ವಕ್ಕೆ ಇನ್ನೂ ಹೆಚ್ಚು ಶೋಭೆ ತರುತ್ತದೆಂದು ನಾನು ಭಾವನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದರು, ಮಾನ್ಯ ಡಿ. ಬಿ. ಚಂದ್ರೇಗೌಡರು ಹೇಳಿದರು, ಮಾನ್ಯ ಯಡಿಯೂರಪ್ಪನವರು ಹೇಳಿದರು, ಅದೇರೀತಿ ಮಾನ್ಯ ಖಮರುಲ್ ಇಸ್ಲಾಂರವರು, ಮಾನ್ಯ ವಾಟಾಳ್ ನಾಗರಾಜ್‌ರವರೂ ಹೇಳಿದರು, ನಾನು ಈ ಸದನಕ್ಕೆ ಹೊಸಬನಲ್ಲ ಎಂದು. ಮಾನ್ಯ ವೀರೇಂದ್ರ ಪಾಟೀಲರು ನನ್ನನ್ನು ೧೯೭೨ನೇ ಇಸವಿಯ ಕಡೆಗೆ ಕರೆದು ಕೊಂಡು ಹೋದರು. ೧೯೭೨ನೇ ಇಸವಿಯಲ್ಲಿ ನಾನು ಈ ಸದನಕ್ಕೆ ಬಂದಾಗ ಬಹಳ ಸ್ಫೂರ್ತಿಯಿಂದ ಬಂದೆ. ಸಮಾಜವಾದಿ ಚಿಂತನೆಯಲ್ಲಿ ಬಂದೆ. ಅನಂತರ ನಮ್ಮ ದೇಶದ ರಾಜಕಾರಣದ ಬಹಳಷ್ಟು ಪ್ರಕಾರಗಳನ್ನು ಸುತ್ತಿ ಈಗ ಇಲ್ಲಿಗೆ ಬಂದು ಕುಳಿತ್ತಿದ್ದೇನೆ. ನನಗೆ ಒಂದು ಸಮಾಧಾನ ಏನೆಂದರೆ, ಈ ಸಭೆಗೆ ಶೋಭೆಯನ್ನು ತಂದಿರತಕ್ಕ ಹಿರಿಯ ಮಾನ್ಯ ಸದಸ್ಯರು ಇಲ್ಲಿದ್ದಾರೆ. ಅವರುಗಳಿಂದರೆ, ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹಿಂದೆ ಇದೇ ಸಭೆಯಲ್ಲಿ ೬ ವರ್ಷಗಳ ಕಾಲ ಅಧ್ಯಕ್ಷಿಣಿಯವರಾಗಿದ್ದರು, ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರೂ ಈ ಸಭೆಯ ಅಧ್ಯಕ್ಷರಾಗಿದ್ದರು. ಅದೇರೀತಿ ಇವತ್ತು ವಿರೋಧಪಕ್ಷದ ಸಾಲಿನಲ್ಲಿರತಕ್ಕ ಮಾನ್ಯ ಡಿ. ಬಿ. ಚಂದ್ರೇಗೌಡರೂ ಕೂಡ ಈ ಸಭೆಯ ಅಧ್ಯಕ್ಷರಾಗಿದ್ದರು. ಇದರ ಜೊತೆಗೆ ವಿಧಾನ ಪರಿಷತ್ತಿನಲ್ಲಿ ಸಭಾಪತಿಯವರಾಗಿದ್ದಂಥ ಶ್ರೀಮಾನ್ ಎಂ. ವಿ. ವೆಂಕಟಪ್ಪನವರೂ ಈ ಸದನದಲ್ಲಿದ್ದಾರೆ, ಮತ್ತು ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿಯವರೂ ಕೂಡ ವಿಧಾನ ಪರಿಷತ್ತಿನಲ್ಲಿ ಉಪ ಸಭಾಪತಿಯವರಾಗಿದ್ದರು. ಮಾನ್ಯ ಡಾ. ಮಾಲಕರೆಡ್ಡಿಯವರೂ ವಿಧಾನ ಪರಿಷತ್ತಿನ ಉಪ ಸಭಾಪತಿಯವರಾಗಿದ್ದರು. ಇದೆಲ್ಲದ್ದರಿಂದ ಈ ಸಭೆಗೆ ಬಹಳ ಹೆಚ್ಚಿನ ತೂಕವಿದೆ ಎಂಬುದನ್ನು ತಪ್ಪಿಗೆ ಹೇಳಬಯಸುತ್ತೇನೆ. ಮತ್ತು ಇಷ್ಟೊಂದು ಜನರು ಹಿಂದೆ ಈ ಎರಡೂ ಸದನಗ ಅಧ್ಯಕ್ಷರಾಗಿದ್ದವರು ಇಲ್ಲಿರುವುದರಿಂದ ನನಗೆ ಬಹಳ ಒಳ್ಳೆಯ ಮಾರ್ಗದರ್ಶನ ಸಿಕ್ಕುತ್ತದೆಂಬ ಆಶಾಭಾವನೆ ನನಗಿದೆ. ನಾನು ಹಿಂದೆ ಸಂಸತ್ತಿನಲ್ಲಿದುಕೊಂಡು ಅಲ್ಲಿಯ ವ್ಯವಹಾರ ಗಳನ್ನು ನೋಡಿದ್ದೇನೆ. ಪಾರ್ಲಿಮೆಂಟರಿ ಚೌಕಟ್ಟಿನೊಳಗೆ ವಾದಗಳನ್ನು ಮಂಡಿಸತಕ್ಕ ಘಟಾನುಘಟಿಗಳ ವಾದಸರಣಿಗಳನ್ನು ಕೇಳಿ ನಾನು ಸ್ಫೂರ್ತಿಯನ್ನು ಪಡೆದಿದ್ದೇನೆ.

ಹಿಂದೆ ಸಂಸತ್ತಿನಲ್ಲಿ ಸ್ಪೀಕರ್ ಆಗಿದ್ದಂಥ ವಿಠಲ್‌ಭಾಯಿ ಪಟೇಲ್‌ರವರ ಭಾಷಣಗಳನ್ನು ಕೇಳಿದ್ದೇನೆ; ಅದೇ ರೀತಿ ಶ್ರೀಮಾನ್ ಮೌಲಿಕರ್‌ರವರ ವಿಚಾರಾಧರೆಯನ್ನು ನಾನು ಕೇಳಿದ್ದೇನೆ. ಆದ್ದರಿಂದ ಈ ದೇಶದ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ವಿಷಯಗಳ ಚರ್ಚೆಗೆ ಏನು ಅವಕಾಶವನ್ನು ಮಾನ್ಯ ಸದಸ್ಯರಿಗೆ ಕೊಡಬೇಕೋ ಅದನ್ನು ಕೊಡುತ್ತೇನೆ. ಇದರಲ್ಲಿ ಯಾರಿಗೂ ಯಾವುದೇ ಅನುಮಾನವೂ ಬೇಡ ವೆಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಇನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ''ನಿಮ್ಮ ಕಿರುಗಣ್ಣನ್ನು ನಮ್ಮ ಕಡೆಗೂ ತಿರುಗಿಸಿ'' ಎಂದು ಹೇಳಿದರು. ನಾನು ಈ ಸದನದ ಎಲ್ಲಾ ಸದಸ್ಯರ ಕಡೆಗೂ ನನ್ನ ಕಿರುಗಣ್ಣನ್ನು ತಿರುಗಿಸುತ್ತೇನೆ. ನಾನು ಯಾರ ಕಡೆಗೂ ಉರಿಗಣ್ಣನ್ನು ಬಿಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕೊಡಬಯಸುತ್ತೇನೆ.

ಇದುವರೆಗೆ ತಾವು ನನ್ನ ಬಗ್ಗೆ ಈರಿವಸ ವ್ಯಕ್ತಪಡಿಸಿದ ಔದಾರ್ಯದ ಮಾತುಗಳಿಗೆ ನಾನು ಅತ್ಯಂತ ವಿನಂಬ್ರನಾಗಿ ನಮಸ್ಕರಿಸುತ್ತೇನೆ.

ಈಗಾಗಲೇ ಬಹಳ ಹೊತ್ತಾಗಿದೆ. ಈ ದಿನ ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಕುರಿತು ಭಾಷಣ ಮಾಡುವವರಿದ್ದಾರೆ. ಆದ್ದರಿಂದ ಇಲ್ಲಿಗೆ ಈ ಸಭೆಯನ್ನು ಮುಂಕ್ಕಾಯ ಮಾಡಿ ಸಂಜೆ ೪ ಗಂಟೆಯ ವರೆಗೂ ಈ ಸಭೆಯನ್ನು ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ ೨-೧೫ ಗಂಟೆಗೆ ಮುಂಕ್ಕಾಯವಾಗಿ ಮತ್ತೆ ಸಂಜೆ ೪ ಗಂಟೆಗೆ ಸಭಾವೇಶ ಗೊಳ್ಳುವುದೆಂದು ತೀರ್ಮಾನಿಸಿತು.)